3

# ಯೇಸು: ಆತನ ಮರಣದಲ್ಲಿ ಪ್ರವಾದನೆಯ ನೆರವೇರಿಕೆ

ಯೇಸುವಿನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನದಲ್ಲಿ ಹಳೇ ಒಡಂಬಡಿಕೆಯ ನೆರವೇರುವಿಕೆಯನ್ನು ಎಷ್ಟು ವಿಶದವಾಗಿ ನೋಡುತ್ತೇವೆ! ನಮ್ಮ ರಕ್ಷಕನು ಶಿಲುಬೆ ಹಾಕಲ್ಪಡುವುದು ಆತನು ಜನಿಸುವದಕ್ಕಿಂತ ಮೊದಲೇ ವಿವರವಾಗಿ ಪ್ರವಾದನೆಗಳಲ್ಲಿ ಪ್ರಕಟಿಸಲ್ಪಟ್ಟವು. ಈ ಪ್ರವಾದನೆಯ ಮತ್ತು ನೆರವೇರುವಿಕೆಯ ಉದಾಹರಣೆಗಳ ಅಧ್ಯಯನ ಮಾಡಿರಿ ಹಾಗೂ ದೇವರ ದೈವಿಕ ಕುಮಾರನಂತೆ ಯೇಸುವಿನಲ್ಲಿ ನಿಮ್ಮ ನಂಬಿಕೆಯನ್ನು ವೃದ್ಧಿಕೊಳಿಸಿಕೊಳ್ಳಿರಿ.[1]

## ತನ್ನ ಪಾದಗಳ ಕೆಳಗೆ ಎಲ್ಲಾ ಸಂಗತಿಗಳಿರುವ ಮನುಷ್ಯ (ಕೀರ್ತನೆ 8:4-6)

ಆದಿಕಾಂಡ 1:26-28ರಲ್ಲಿ ದೇವರು ಆದಾಮನಿಗೂ ಅವನ ಸಂತತಿಯವರಿಗೂ ಭೂಲೋಕದ ಮೇಲೆಲ್ಲಾ ದೊರೆತನ ನಡಿಸಬೇಕೆಂದು ಆಜ್ಞಾಪಿಸಿದನು. 8ನೆಯ ಕೀರ್ತನೆಯು ಆ ಆಜ್ಞೆಯ, ಮಾನವರಿಗೆ ಆತನ ಪರಿಪಾಲನೆಗಾಗಿ ದೇವರನ್ನು ಕೊಂಡಾಡುವ ಮತ್ತು ಕೃತಜ್ಞತಾಸ್ತುತಿ ಮಾಡುವದರ ಪುನರಾವರ್ತನೆಯಾಗಿದೆ. ವಚನ 4 ಹೀಗೆ ಹೇಳುತ್ತದೆ,

> ನೀನು ಮನುಷ್ಯನನ್ನು ನೆನಸಲು ಅವನು ಎಷ್ಟು ಮಾತ್ರದವನು?
> ಅವನಲ್ಲಿ ಲಕ್ಷವಿಡಲು ಅವನು ಎಷ್ಟರವನು?

ವಿಶ್ವದ ಅಳತೆಯೊಂದಿಗೆ ಮನುಷ್ಯನನ್ನು ಹೋಲಿಸಿದರೆ ಅವನು ಅತಿ ಚಿಕ್ಕವನಾಗಿ ಕಾಣುತ್ತಾನೆ. ಅವನ ಅಳತೆಯು ವಿಶ್ವದಲ್ಲಿ ಮಾನವನ ಬೆಲೆಯನ್ನು ತೀರ್ಮಾನಿಸುವದಾದರೆ ಅವನು ಬಹಳ ಮೌಲ್ಯವುಳ್ಳವನಾಗಿರುವದಿಲ್ಲ. ಹೀಗಿದ್ದರೂ "ಇಸ್ರಾಯೇಲಿನ ಮಧುರ ಗಾಯಕನಿಂದ" ಹೇಳಲ್ಪಟ್ಟಂತೆ ಎರಡು ಕ್ಷೇತ್ರಗಳಲ್ಲಿ ಮನುಷ್ಯನ ಉನ್ನತ ಗೌರರವು ಕಂಡು ಬರುತ್ತದೆ: (1) ದೇವದೂತರುಗಳಿಗಿಂತ ಸ್ವಲ್ಪ ಮಾತ್ರ ಕಡಿಮೆಯಾಗಿ ಅವನು ಮಾಡಲ್ಪಟ್ಟಿದ್ದಾನೆ ಮತ್ತು (2) ಲೋಕದಲ್ಲಿಯ ಎಲ್ಲವುಗಳ ಮೇಲೆ ಅವನಿಗೆ ಅಧಿಕಾರಕೊಡಲ್ಪಟ್ಟಿದೆ. ಮಹಾ ದೇವರು "ಎಲ್ಲವನ್ನೂ ಅವನ ಪಾದಗಳ ಕೆಳಗೆ ಹಾಕಿ ಅವನಿಗೆ ಅಧೀನ ಮಾಡಿದನು. 'ಅತನು ಎಲ್ಲವನ್ನೂ ಮನುಷ್ಯನಿಗೆ ಅಧೀನ ಮಾಡಿದನೆಂಬದರಲ್ಲಿ ಅವನಿಗೆ ಒಂದನ್ನಾದರೂ ಅಧೀನಮಾಡದೇ ಬಿಡಲಿಲ್ಲವೆಂದು ಹೇಳಿದ ಹಾಗಾಯಿತು' " (ಇಬ್ರಿಯ 2:8).

ನಿಶ್ಚಲವಾಗಿ, ಆದಾಮನ ಸಮಯದ ನಂತರ, ಮನುಷ್ಯನು ಪ್ರತಿಯೊಂದು ಪ್ರಾಣಿಯನ್ನು ವಶಪಡಿಸಿಕೊಂಡಿದ್ದಾನೆ ಮತ್ತು ಭೂಮಿಯನ್ನು, ಸಮುದ್ರವನ್ನು, ಗಾಳಿಯನ್ನು ಹಾಗೂ ಅಂತರಿಕ್ಷವನ್ನು ಜಯಿಸಿದ್ದಾನೆ. ಮಾನವರಿಂದ ತಮ್ಮ ಪರಿಸರದ

ಮೇಲೆ ಅನೇಕ ಜಯಗಳು ಸಾಧಿಸಲ್ಪಟ್ಟಿವೆ; ಅತಿಯಾಗಿ ಸಂಶಯ ಪಡುವ ಜನರೂ ಸಹ ಇದನ್ನು ಅಥವಾ ಅದನ್ನು ಮಾಡಲಿಕ್ಕಾಗದು ಎಂದು ಹೇಳಲು ಹಿಂಜರಿಯುತ್ತಾರೆ.

ಮಾನವನ ಪ್ರಗತಿಯಿದ್ದರೂ, ಆದಾಮನಿಂದ ಯೇಸುವಿನ ಸಮಯದವರೆಗೆ ಒಂದು ಜಯಿಸಲಾರದ ವೈರಿಯು, ಮರಣವು ಉಳಿದು ಕೊಂಡಿತ್ತು. ಇಬ್ಬರು ಪುರುಷರು (ಆದಿಕಾಂಡ 5:24; 2 ಅರಸುಗಳು 2:11) ಸಾಯಬೇಕಾಗಿರದಿದ್ದರೂ, ಅವರು ಕೇವಲ ಅಪವಾದವಾಗಿದ್ದರು; ಯಾಕಂದರೆ ಒಮ್ಮೆ ಸಾಯುವುದು ಮನುಷ್ಯರಿಗೆ ನೇಮಿಸಲ್ಪಟ್ಟಿತ್ತು (ಇಬ್ರಿಯ 9:27). ವಿಶ್ವಾಸದ ಜನರನ್ನು ಹೊರತು ಪಡಿಸಿ, ಮರಣದ ನಿಶ್ಚಿತತೆಯು ಭಯಾನಕತೆಯ ಪ್ರೇತ ವಸ್ತ್ರವನ್ನು ಬಿಟ್ಟಿತ್ತು. ಜನರು, ಮರಣದ ಭಯದ ಮುಖಾಂತರ ತಮ್ಮ ಜೀವನದ ಸಮಯದಲೆಲ್ಲಾ ಬಂಧನಕ್ಕೆ ಒಳಗಾಗಿದ್ದರು (ಇಬ್ರಿಯ 2:15). ಪುನರುತ್ಥಾನದ ಮಿತವಾದ ಉದಾಹರಣೆಗಳು (1 ಅರಸುಗಳು 17:21, 22; 2 ಅರಸುಗಳು 4:35; 13:21) ತೀರಲಾಗದ ನಿರೀಕ್ಷೆಯನ್ನು ತರಲಿಲ್ಲ, ಯಾಕಂದರೆ ಎಬ್ಬಿಸಲ್ಪಟ್ಟ ಪ್ರತಿಯೊಬ್ಬರೂ ಪುನಃ ಸಾಯಬೇಕಾಗಿತ್ತು.[2] ಮರಣಕ್ಕೆ ಇನ್ನೂ ಆಡಳಿತೆಯಿತ್ತು ಮತ್ತು ಮನುಷ್ಯರ ದೇಹಗಳು ಕೊಳೆಯುವ ಅವಸ್ಥೆಯನ್ನು ನೋಡಿದವು. ಮರಣದ ಬಂದನದಿಂದ ಮನುಷ್ಯನು ಹೇಗೆ ಬಿಡುಗಡೆ ಹೊಂದುವನು? ಮನುಷ್ಯನಿಗೆ "ಎಲ್ಲಾ" ಸಂಗತಿಗಳು ವಶವಾಗಿರುವವೆಂಬುದು ದೇವರ ನಿಜವಾದ ಅರ್ಥವಾಗಿತ್ತೋ? ಮನುಷ್ಯನ ಅಧಿಕಾರಕ್ಕೆ ಒಂದು ದೈತ್ಯಾಕಾರದ, ಭಯಾನಕವಾದ ಅಪವಾದವಿರಬೇಕಾಗಿತ್ತೋ?

ದೇವರ ಜ್ಞಾನದಲ್ಲಿ ಯೇಸುವು ಭೂಲೋಕಕ್ಕೆ ಕಳುಹಿಸಲ್ಪಟ್ಟನು. ದೇವದೂತರುಗಳ ಸ್ವಭಾವದಲ್ಲಿ ಆತನು ಬರಲಿಲ್ಲ. ಆತನು ಹಾಗೆ ಬಂದಿದ್ದರೆ "ಮನುಷ್ಯನಿಗೆ" ಪ್ರತಿಯೊಂದರ ಮೇಲೆ ದೊರೆತನದ ದೇವರ ವಾಗ್ದಾನದಲ್ಲಿ ಆತನು ಕೂಡಿಸಲ್ಪಡುತ್ತಿರಲಿಲ್ಲ (ಆದಿಕಾಂಡ 1:26; ಕೀರ್ತನೆ 8:4). ಅದಲ್ಲದೇ ದೇವದೂತರುಗಳು ಸಾಯುವದಿಲ್ಲ (ಲೂಕ 20:36). ಸಾಯುವದರ ಮುಖಾಂತರ ಮನುಷ್ಯನು ಸದಾಕಾಲಕ್ಕೂ ಮರಣವನ್ನು ಜಯಿಸುವನು ಎಂಬುದು ಪರಲೋಕದ ಜ್ಞಾನವಾಗಿತ್ತು.

ಅದಕ್ಕನುಗುಣವಾಗಿ, "ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿ ಬಿಡಲಿಕ್ಕಾಗುವಂತೆ" (ಇಬ್ರಿಯ 2:14) ದೇವರು ಯೇಸುವನ್ನು ಮನುಷ್ಯನಂತೆ, ರಕ್ತ ಮಾಂಸದಲ್ಲಿ ಹಂಚಿಕೊಳ್ಳುವವನಾಗುವಂತೆ, ಮರಣಕ್ಕೆ ಒಳಪಟ್ಟವನೂ ಬಲಿಪಶುವೂ ಆಗುವಂತೆ ಕಳುಹಿಸಿಕೊಟ್ಟನು. ಆತನ ಪುನರುತ್ಥಾನವು ಇತರ ಎಲ್ಲರಿಗಿಂತಲೂ ಭಿನ್ನವಾಗಿತ್ತು. ಅದರಲ್ಲಿ "ಮರಣವು ಇನ್ನು ಆತನನ್ನು ಆಳುವದಿಲ್ಲ" (ರೋಮಾಪುರ 6:9). ಇನ್ನು ಆತನು "ಕೊಳೆಯುವ ಅವಸ್ಥೆಗೆ ಸೇರತಕ್ಕವನಲ್ಲ" (ಅಪೊಸ್ತಲರ ಕೃತ್ಯ 13:34). "ನಾನು ಬದುಕುವದರಿಂದ ನೀವೂ ಬದುಕುವಿರಿ" (ಯೋಹಾನ 14:19) ಎಂದು ಆತನು ವಾಗ್ದನ ಮಾಡಬಲ್ಲವನಾದನು.

ಈಗಲೂ ಸಹ, ಯೇಸುವಿನ ಪುನರುತ್ಥಾನದ ನಂತರ ಎರಡು ಸಾವಿರ ವರ್ಷಗಳಾದ ಮೇಲೆ, ಆದಿಕಾಂಡ 1:26 ಮತ್ತು ಕೀರ್ತನೆ 8:4ರಲ್ಲಿ ಮನುಷ್ಯನಿಗೆ ದೇವರ ವಾಗ್ದಾನದ ಸಂಪೂರ್ಣ ನೆರವೇರುವಿಕೆಯನ್ನು ನಾವು ನೋಡಿರುವದಿಲ್ಲ. ಹಾಗಿದ್ದರೂ, ಈಗ, ಎಲ್ಲಾ ಭಯಾನಕತೆಯು ಹೋಗಿದೆ, ಯಾಕಂದರೆ ಸದಾಕಾಲಕ್ಕೂ ಜೀವಿಸಲು ಯೇಸುವು ತನ್ನನ್ನು ಎಬ್ಬಿಸಿಕೊಂಡಿದ್ದಾರೆ, ಮರಣದ ಬೀಗದ ಕೈಗಳನ್ನು ಹಿಡಿದು ಕೊಂಡಿದ್ದಾರೆ (ಪ್ರಕಟನೆ 1:17, 18) ಆತನ ಮುಖಾಂತರ ನಮ್ಮ ಜಯವು ನಿಶ್ಚಿತಪಡಿಸಲ್ಪಟ್ಟಿದೆ ಎಂದು ತಿಳಿಯುತ್ತೇವೆ. ದೇವರು ಮೂಲದಲ್ಲಿ ವಾಗ್ದಾನ ಮಾಡಿದ್ದು ಮಾಡಲ್ಪಟ್ಟಷ್ಟೇ ಒಳ್ಳೆಯದಾಗಿದೆ! ಯೇಸುವು, "ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ

ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವುದು ಅವಶ್ಯ. ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವುದು. ದೇವರು ಸಮಸ್ತವನ್ನೂ ಆತನ ಪಾದಗಳ ಕೆಳಗೆ ಹಾಕಿ ಆತನಿಗೆ ಅಧೀನಮಾಡಿದ್ದಾನೆಂಬುದಾಗಿ ಹೇಳಿದೆಯಲ್ಲಾ" (1 ಕೊರಿಂಥ 15:25-27ಎ).

ಹೀಗೆ ಮೂಲದಲ್ಲಿ ಎಲ್ಲಾ ಮಾನವ ಜೀವಿಗಳಿಗೆ ಮಾಡಿದ ಮುಂತಿಳಿಸುವಿಕೆಯು ಒಬ್ಬ ಪ್ರತ್ಯೇಕ ಮಾನವ ಜೀವಿಯ, ಮನುಷ್ಯನಾದ ಕ್ರಿಸ್ತ ಯೇಸುವಿನ ಬಗ್ಗೆ ಖಂಡಿತವಾದ ಮುಂತಿಳಿಸುವಿಕೆಯಾಗಿತ್ತು. ಆತನಿಲ್ಲದೇ ಆದಾಮನಿಗೆ ಮಾಡಿದ ದೇವರ ವಾಗ್ದಾನವು ಮತ್ತು ಕೀರ್ತನೆಗಾರನಿಂದ ಪುನಃ ಹೇಳಲ್ಪಟ್ಟ ವಾಗ್ದಾನವು ನೆಲಕ್ಕೆ ಬಿದ್ದುಹೋಗ ಬಹುದು. ನಮ್ಮ ಕರ್ತನಾದ ಯೇಸುಕ್ರಿಸ್ತನ ಮುಖಾಂತರ ನಮಗೆ ಜಯಕೊಡುವ ದೇವರಿಗೆ ಸ್ತೋತ್ರವಾಗಲಿ! ದೇವರ ಆಶ್ಚರ್ಯಕರವಾದ ಪ್ರವಾದಿಕ ವಾಕ್ಯಕ್ಕಾಗಿ ಆತನಿಗೆ ಕೃತಜ್ಞತೆಗಳು!

## ಬೇಡವೆಂದು ಬಿಟ್ಟ ಮೂಲೆಗಲ್ಲು (ಕೀರ್ತನೆ 118:22, 23)

ಯೇಸುವು ಕಟ್ಟುವ ಕಲ್ಲಿನಂತೆ ತಿರಸ್ಕರಿಸಲ್ಪಡುವನೆಂದು ಕೀರ್ತನೆ 118:22ಯು ಮುಂತಿಳಿಸಿತು:

> ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು.

> ತನ್ನನ್ನು ತಿರಸ್ಕರಿಸುವವರಂತೆ ಯೇಸುವು ಯೆಹೂದ್ಯರನ್ನು ತೋರಿಸಿದಾಗ ಈ ಮುಂತಿಳಿಸುವಿಕೆಯ ಹೇಳಿಕೆಯನ್ನು ಯೇಸುವು ಉಲ್ಲೇಖಿಸಿದನು.

> "ಮನೆ ಕಟ್ಟುವವರು ತಿರಸ್ಕರಿಸಿದ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು; ಇದು ಕರ್ತನಿಂದಲೇ ಆಯಿತು; ನಮಗೆ ಆಶ್ಚರ್ಯವಾಗಿ ತೋರುತ್ತದೆ" ಎಂಬುವ ಮಾತನ್ನು ನೀವು ಪರಿಶುದ್ಧ ಲೇಖನದಲ್ಲಿ ಎಂದಾದರೂ ಓದಲಿಲ್ಲವೋ? (ಮತ್ತಾಯ 21:42).

ಪೇತ್ರನು ಯೆಹೂದಿ ಅಧಿಕಾರಿಗಳಿಗೆ ಮಾತಾಡುವಲ್ಲಿ ಕೀರ್ತನೆ 118:22, 23ನ್ನು ಯೇಸು ಅನ್ವಯಿಸಿದಂತೆಯೇ ಅನ್ವಯಿಸಿದನು: "ಮನೆಕಟ್ಟುವವರಾದ ನೀವು ತಿರಸ್ಕರಿಸಿದ ಕಲ್ಲು ಆತನು; ಆತನೇ ಮುಖ್ಯವಾದ ಮೂಲೆಗಲ್ಲಾದನು" (ಅಪೊಸ್ತಲರ ಕೃತ್ಯ 4:11).

ಕೀರ್ತನೆ 118:22, 23, ಅಲ್ಲದೇ ಇನ್ನೊಂದು ಮುಂತಿಳಿಸುವಿಕೆಯ ಹೇಳಿಕೆಯು ಯೇಸುವನ್ನು ಕಲ್ಲಿನಂತೆ ಹೇಳಿತು. ಸುವಾರ್ತೆಯ ಪ್ರವಾದಿಯು ಯೇಸುವು, "ಎಡವುವ ಕಲ್ಲೂ ಮುಗ್ಗರಿಸುವ ಬಂಡೆಯೂ ಯೆರೂಸಲೇಮಿನ ನಿವಾಸಿಗಳಿಗೆ ಬಲೆಯೂ ಬೋನೂ ಆಗುವನು. ಅವರಲ್ಲಿ ಅನೇಕರು ಎಡವಿಬಿದ್ದು ಭಂಗವಾಗುವರು, ಬೋನಿಗೆ ಸಿಕ್ಕಿ ವಶವಾಗುವರು" (ಯೆಶಾಯ 8:14ಬಿ, 15) ಎಂದು ಬರೆದಿದ್ದಾನೆ.

"ಈ ಕಲ್ಲಿನ ಮೇಲೆ ಬೀಳುವವನು ತುಂಡು ತುಂಡಾಗುವನು; ಇದು ಯಾರ ಮೇಲೆ ಬೀಳುತ್ತದೋ ಅವನನ್ನು ಪುಡಿಪುಡಿ ಮಾಡುವದು" (ಮತ್ತಾಯ 21:44) ಎಂದು ಹೇಳಿದಾಗ ಯೇಸುವು ಯೆಶಾಯನ ಪ್ರವಾದನೆಯನ್ನು ಸಂಬಂಧಿಸಿ ನುಡಿದನು. ಯೆಶಾಯನ ಮುಂತಿಳಿಸುವಿಕೆಯನ್ನು ಯೇಸುವು ಅನ್ವಯಿಸಿದ್ದನ್ನು ಸುತ್ತಲೂ ನಿಂತುಕೊಂಡಿದ್ದವರು ಅದರ ಸ್ಪಷ್ಟ ಅರ್ಥವನ್ನು ತಿಳಿದುಕೊಂಡರು:

"ಮಹಾಯಾಜಕರೂ ಫರಿಸಾಯರೂ ಆತನ ಸಾಮ್ಯಗಳನ್ನು ಕೇಳಿ ತಮ್ಮನ್ನೇ ಕುರಿತು ಮಾತಾಡುತ್ತಾನೆಂದು ತಿಳಿದು ಕೊಂಡರು" (ಮತ್ತಾಯ 21:45).

ಇಸ್ರಾಯೇಲರು ಯೇಸುವನ್ನು ತಿರಸ್ಕರಿಸಿದಾಗ ಯೆಶಾಯನ ಪ್ರವಾದನೆಯು ನೆರವೇರಿತು ಎಂದು ಪೌಲನು ಅನಂತರದಲ್ಲಿ ಸಂಬಂಧಿಸಿ ಹೇಳಿದ್ದಾನೆ: " 'ಇಗೋ, ಚೀಯೋನಿನಲ್ಲಿ ಎಡವುವ ಕಲ್ಲನ್ನೂ ಮುಗ್ಗರಿಸುವ ಬಂಡೆಯನ್ನೂ ಇಡುತ್ತೇನೆಂತಲೂ' ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವದಿಲ್ಲವೆಂತಲೂ ಪರಿಶುದ್ಧ ಲೇಖನದಲ್ಲಿ ಬರೆದದೆಯಲ್ಲಾ. ಆ ಎಡವುವ ಕಲ್ಲಿಗೆ ಅವರು ಎಡವಿಬಿದ್ದರು" (ರೋಮಾಪುರ 9:32ಬಿ, 33ಎ).

ಅಂತಿಮವಾಗಿ, ತಿರಸ್ಕರಿಸಲ್ಪಟ್ಟ ಕಲ್ಲಿನಂತೆ ಹಳೇ ಒಡಂಬಡಿಕೆಯಲ್ಲಿ ಯೇಸುವಿನ ಬಗ್ಗೆ ಎರಡೂ ಮುಂತಿಳಿಸುವಿಕೆಗಳು ಅನಂತರದಲ್ಲಿ ಪೇತ್ರನಿಂದ ಅವನ ಮೊದಲನೆಯ ಪತ್ರಿಕೆಯಲ್ಲಿ ಹೇಳಲ್ಪಟ್ಟಿವೆ:

> ... ನಂಬದೇ ಇರುವವರಿಗೋ,
>
> "ಮನೆ ಕಟ್ಟುವವರು ತಿರಸ್ಕರಿಸಿ ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು" ಎಂತಲೂ,
> "ಅದು ಎಡವುವ ಕಲ್ಲು ಮುಗ್ಗರಿಸುವ ಬಂಡೆ ಎಂತಲೂ" ಬರೆದಿರುವ ಮಾತು ಸರಿಬೀಳುತ್ತದೆ. ಅವರು ದೇವರ ವಾಕ್ಯವನ್ನು ನಂಬಲೊಲ್ಲದೆ ಇರುವದರಿಂದ ಆ ಕಲ್ಲನ್ನು ಎಡವಿ ಬೀಳುತ್ತಾರೆ; ಅದಕ್ಕಾಗಿಯೇ ಅವರು ನೇಮಕವಾದರು (1 ಪೇತ್ರ 2:7, 8).

## ಸ್ನೇಹಿತನಿಂದ ನಂಬಿಕೆದ್ರೋಹ ಹೊಂದಿದನು (ಕೀರ್ತನೆ 41:9)

ಅಬ್ಷಾಲೋಮನಿಗೆ ಸಲಹೆಗಾರನಾಗಿದ್ದ ಅಹೀತೋಫೆಲನು ಹಳೇ ಒಡಂಬಡಿಕೆಯ ಯೂದ ಎಂದು ಕರೆಯಲ್ಪಟ್ಟಿದ್ದಾನೆ. ದಾವೀದನ ಮತ್ತು ಅಬ್ಷಾಲೋಮನ ದಿನಗಳಲ್ಲಿ ಅವನ ಸಲಹಗೆ ಬೆಲೆಯಿತ್ತು: "... ದೈವೋತ್ತರಗಳಿಗಿರುವಷ್ಟು ಬೆಲೆಯಿತ್ತು. ದಾವೀದನೂ ಅಬ್ಷಾಲೋಮನೂ ಅವನ ಆಲೋಚನೆಗಳನ್ನು ಗೌರವಿಸುತ್ತಿದ್ದರು" (2 ಸಮುವೇಲ 16:23). ಆಹೀತೋಫೆಲನು ಊಟಗಳಿಗಾಗಿ ಅರಮನೆಯ ಅತಿಥಿಯಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಅನಂತರದಲ್ಲಿ ಅವನು ಅಬ್ಷಾಲೋಮನಿಗೆ ಬೆಂಬಲವಾಗಿ ದಾವೀದನಿಗೆ ವಿರುದ್ಧವಾಗಿ ಎದ್ದನು. ತನ್ನ ನಂಬಿಗಸ್ತ ಆಸ್ಥಾನದ ಸಲಹೆಗಾರನ ಹಾಗೂ ವೈಯಕ್ತಿಕ ಭರವಸೆಯುಳ್ಳವನ ದ್ರೋಹದ ಕಾರ್ಯವನ್ನು ದಾವೀದನು ತಿಳಿದು ಕೊಂಡಾಗ, ಕೀರ್ತನೆ 41:9ರಲ್ಲಿ ವ್ಯಕ್ತಪಡಿಸಿದ ಭಾವನೆಗಳು ಅವನ ಹೃದಯವನ್ನು ಕಲಕಿದವು. "ನಾನು ಯಾವನನ್ನು ನಂಬಿದ್ದೇನೋ ಯಾವನು ನನ್ನ ಮನೆಯಲ್ಲಿ ಅನ್ನಪಾನಗಳನ್ನು ತೆಗೆದು ಕೊಂಡನೋ ಅಂಥ ಆಪ್ತ ಸ್ನೇಹಿತನು ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ" ಎಂದು ಬರೆಯಲು ಅವನು ಪ್ರೇರೇಪಿಸಲ್ಪಟ್ಟನು.

ನಟಿಸುವ ಸ್ನೇಹಿತನಿಂದ ಅಲ್ಲಗಳೆಯಲ್ಪಡುವುದು ಏನಾಗಿದೆಯೆಂಬುದನ್ನು ಸಹ ಯೇಸು ತಿಳಿದಿದ್ದನು. ದ್ರೋಹದ ಕಾರ್ಯವು ಸಂಭವಿಸುವವರೆಗೆ ತನಗೆ ದ್ರೋಹ ವಾಗುವದೆಂದು ದಾವೀದನು ತಿಳಿದಿರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಯೇಸುವು ತನ್ನ ಶಿಷ್ಯರಲ್ಲಿ ಯಾರು ತನ್ನನ್ನು ಹಿಡಿದು ಕೊಡುವರು (ಯೋಹಾನ 6:64) ಎಂಬುದನ್ನು ಮೊದಲಿನಿಂದಲೇ ತಿಳಿದಿದ್ದನು ಹಾಗೂ ಹಿಡಿದುಕೊಡುವದಕ್ಕಿಂತ ಮುಂಚಿತವಾಗಿಯೇ

ಆ ವಿಷಯದ ಬಗ್ಗೆ ಮಾತಾಡಿದನು. ತನ್ನ ದೈವತ್ವದ ಬಗ್ಗೆ ಇತರ ಶಿಷ್ಯರಿಗೆ ಹೆಚ್ಚಿನ ಭರವಸೆ ಇರಲಿಕ್ಕಾಗುವಂತೆ ಸಂಭವಿಸಲಿಕ್ಕಿರುವದನ್ನು ಯೇಸುವು ಸಮಯದ ಮೊದಲೇ ಪ್ರಕಟಿಸಿದನು:

> ನಾನು ನಿಮ್ಮೆಲ್ಲರನ್ನು ಕುರಿತು ಈ ಮಾತನ್ನು ಹೇಳಲಿಲ್ಲ; ನಾನು ಆದುಕೊಂಡವರನ್ನು ನಾನು ಬಲ್ಲೆನು; ಆದರೆ, "ನನ್ನ ಕೂಡ ಊಟಮಾಡುವವನೇ ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ" ಎಂಬ ಪರಿಶುದ್ಧ ಲೇಖನದ ಮಾತು ನೆರವೇರಬೇಕಾಗಿದೆ, ಇದು ನಡೆಯುವಾಗ ನನ್ನನ್ನೇ ಆತನೆಂದು ನೀವು ನಂಬುವಂತೆ ಅದು ನಡೆಯುವದಕ್ಕಿಂತ ಮುಂಚೆ ಅದನ್ನು ಇಂದಿನಿಂದ ನಿಮಗೆ ಹೇಳುತ್ತೇನೆ (ಯೋಹಾನ 13:18, 19).

ಯೇಸುವು ತನ್ನ ಪೂರ್ವ ಜ್ಞಾನವು ತನ್ನ ದೈವತ್ವದ ಪುರಾವೆಯಾಗಿತ್ತು ಎಂದು ನಂಬಿದ್ದನೆಂದು ಸ್ಪಷ್ಟವಾಗುತ್ತದೆ.

## ವಿಶ್ವಾಸ ಘಾತದ ಹಣವು ತಿರಸ್ಕರಿಸಲ್ಪಟ್ಟಿತ್ತು (ಜೆಕರ್ಯ 11:13)

ತನ್ನ ವ್ಯವಹಾರದ ಬಗ್ಗೆ ಅಸಹ್ಯಪಟ್ಟಿಕೊಳ್ಳುವಾಗ ಜೀವಹತ್ಯದ ಹಣದೊಂದಿಗೆ ಯೇಸುವನ್ನು ಹಿಡಿದು ಕೊಟ್ಟವನು ಏನು ಮಾಡಿದನು ಎಂಬುದರ ಬಗ್ಗೆ ಜೆಕರ್ಯನು ಸ್ಪಷ್ಟವಾಗಿದ್ದನು: "ನಾನು ಆ ಮೂವತ್ತು ತೊಲ ಬೆಳ್ಳಿಯನ್ನು ತೆಗೆದು ಯೆಹೋವನ ಆಲಯದಲ್ಲಿ ಕುಂಬಾರನಿಗೆ ಎಸೆದೆನು" (ಜೆಕರ್ಯ 11:13).

ಈ ಪುರಾತನ ಪ್ರವಾದನಯ ನೆರವೇರುವಿಕೆಯು ಮತ್ತಾಯನು ವಿವರಿಸಿದಂತೆ, ನೇರವಾದದ್ದಾಗಿರಲಿಲ್ಲ[3]:

> ಆಗ ಆತನನ್ನು ಹಿಡುಕೊಟ್ಟ ಯೂದನು ಆತನಿಗೆ ಮರಣದಂಡನೆಯ ತೀರ್ಪಾಯಿತೆಂದು ನೋಡಿ ಪಶ್ಚಾತ್ತಾಪಪಟ್ಟು ಆ ಮೂವತ್ತು ಬೆಳ್ಳಿಯ ನಾಣ್ಯಗಳನ್ನು ಮಹಾ ಯಾಜಕರಿಗೂ ಹಿರಿಯರಿಗೂ ತಿರಿಗಿ ತಂದು, "ತಪ್ಪಿಲ್ಲದವನನ್ನು ಮರಣಕ್ಕೆ ಒಪ್ಪಿಸಿಕೊಟ್ಟು ಪಾಪ ಮಾಡಿದೆನು" ಅಂದನು. ಅದಕ್ಕವರು, "ಅದು ನಮಗೇನು? ನೀನೇ ನೋಡಿಕೋ!" ಅಂದರು. ಆಗ ಅವನು ಆ ಹಣವನ್ನು ದೇವಾಲಯದೊಳಗೆ ಬಿಸಾಟುಬಿಟ್ಟು ಹೊರಟುಹೋಗಿ ಉರ್ಲು ಹಾಕಿಕೊಂಡು ಸತ್ತನು. ಮಹಾಯಾಜಕರು ಆ ಹಣವನ್ನು ತೆಗೆದುಕೊಂಡು, "ಅದು ಜೀವಹತ್ಯಕ್ಕೆ ಕೊಟ್ಟ ಕ್ರಯವಾದ್ದರಿಂದ ಅದನ್ನು ಕಾಣಿಕೇ ಪೆಟ್ಟಿಗೆಯಲ್ಲಿ ಹಾಕಬಾರದು" ಅಂದರು. ಬಳಿಕ ಅಲೋಚನೆ ಮಾಡಿ, ಪರದೇಶಿಗಳನ್ನು ಹೂಣುವದಕ್ಕೋಸ್ಕರ ಅದರಿಂದ ಕುಂಬಾರನ ಹೊಲವೆಂಬ ಭೂಮಿಯನ್ನು ಕೊಂಡುಕೊಂಡರು. … ಹೀಗೆ ಪ್ರವಾದಿಯಾದ ಯೆರೆಮೀಯನು ಹೇಳಿದ ಮಾತು ನೆರವೇರಿತು: ಅದೇನಂದರೆ, "ಅವರು ಆ ಮೂವತ್ತು ಬೆಳ್ಳಿಯ ನಾಣ್ಯಗಳನ್ನು ತೆಗೆದುಕೊಂಡು ಕರ್ತನು ನನಗೆ ಅಪ್ಪಣೆ ಮಾಡಿದಂತೆ ಅದನ್ನು ಕುಂಬಾರನ ಹೊಲಕ್ಕೆ ಕೊಟ್ಟರು. ಇದೇ ಅವರು ಕ್ರಯ ಕಟ್ಟಿದವನ ಬೆಲೆ, ಇದೇ ಇಸ್ರಾಯೇಲ್ಯರಲ್ಲಿ ಕೆಲವರು ಕ್ರಯಕಟ್ಟಿದವನ ಬೆಲೆ" ಎಂಬದು (ಮತ್ತಾಯ 27:3-10).

ಯೂದನ ಹಣವು ಕುಂಬಾರನ ಹೊಲವನ್ನು ಕೊಂಡು ಕೊಳ್ಳುವದಕ್ಕಾಗಿ

ಹೋಯಿತು. "ಕುಂಬಾರನ ಹೊಲವು" ಆ ಹೆಸರಿನಿಂದ ಬಹಳ ಪ್ರಸಿದ್ಧವಾಗಿರಬಹುದು, ಮೊದಲು ಕುಂಬಾರರಿಂದ ಉಪಯೋಗಿಸಲ್ಪಡುತ್ತಿದ್ದಿರಬಹುದು. ಬಹುಶಃ ಜಿಗುಟು ಮಣ್ಣು ತೀರಿರ ಬೇಕು, ಹಾಗೂ ಭೂಮಿಯನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳಬಹುದಿತ್ತು.[4]

ವಿವಿಧ ಭಾಷಾಂತರಗಳಲ್ಲಿ ಮತ್ತಾಯನು ಜೆಕರ್ಯನ ಪ್ರವಾದನೆಯನ್ನು ಯೆರೆಮೀಯನಿಗೆ ಸಂಬಂಧಿಸಿದ್ದನ್ನು ಓದುವಲ್ಲಿ ಆಶ್ಚರ್ಯಪಟ್ಟುಕೊಳ್ಳುವರು. ಯೆರೆಮೀಯನೂ ಸಹ ಅದೇ ಪ್ರವಾದನೆಯನ್ನು ಬಾಯಿಮಾತಿನಿಂದ ಹೇಳಿರಲೂ ಬಹುದು. ಆದರೆ ಅದನ್ನು ತನ್ನ ಪುಸ್ತಕದಲ್ಲಿ ಹಾಕಿರಲಿಕ್ಕಿಲ್ಲ. ಮತ್ತಾಯನು ಬಹುಶಃ ಜೆಕರ್ಯನ ಲಿಖಿತ ಮುಂತಿಳಿಸುವಿಕೆಯನ್ನು ಕುರಿತು ಹೇಳುತ್ತಿರಬಹುದು.

ತಪ್ಪಾದ ಗ್ರಂಥಕರ್ತನಿಗೆ ಮುಂತಿಳಿಸುವಿಕೆಯನ್ನು ಯಾಕೆ ಮತ್ತಾಯನು ಸಂಬಂಧಿಸಿದನು? ನಿಜವಾಗಿಯೂ ಮತ್ತಾಯನು ಹಾಗೆ ಮಾಡಲಿಲ್ಲ. ಅವನು ಪರಿಶುದ್ಧಾತ್ಮ ನಿಂದ ಪ್ರೇರೇಪಿಸಲ್ಪಟ್ಟನು ಮತ್ತು ಯಾವದೇ ತಪ್ಪು ಮಾಡಲಿಲ್ಲ (ಯೋಹಾನ 14:26; 16:13). ಅದಲ್ಲದೆ, ಅವನು ಅಂಥ ತಪ್ಪುಮಾಡಿದ್ದರೆ, ಮೊದಲಿನ ಯೆಹೂದಿ ಅವಿಶ್ವಾಸಿಗಳು ಆ ತಪ್ಪನ್ನು ಹಿಡಿದುಕೊಂಡು ಅದನ್ನು ದೊಡ್ಡದನ್ನಾಗಿ ಮಾಡುತ್ತಿದ್ದರು. ಅಂಥ ದಾಳಿಯು ಯಾವುದೂ ತಿಳಿದಿರುವದಿಲ್ಲ.

ಭಾಷಾಂತರಗಳಲ್ಲಿ ತಪ್ಪು ಹೇಗೆ ಎದ್ದಿತು? ಮತ್ತಾಯನ ಮೂಲ ಬರಹವು ಅಸ್ತಿತ್ವದಲ್ಲಿದದ್ದು ತಿಳಿದಿರಲಿಲ್ಲ. ನಕಲು ಪ್ರತಿಗಳು ಮಾತ್ರ ಚಾಲತಿಯಲ್ಲಿದ್ದವು, ಅತೀ ಮೊದಲಿನದು ಮತ್ತಾಯನು ಬರೆದ ಬಹಳ ಸಮಯದ ನಂತರ ಮಾಡಲ್ಪಟ್ಟಿತು. ಯಾರೋ ನಕಲು ಮಾಡಿದವನು, ತಾನು ತಿಳಿಯಬೇಕಾದ ರೀತಿಯಲ್ಲಿ ಹಳೇ ಒಡಂಬಡಿಕೆಯ ಪರಿಶುದ್ಧ ಬರಹಗಳನ್ನು ತಿಳಿಯದವನು, ಎಚ್ಚರಿಕೆಯಿಲ್ಲದೇ "ಜೆಕರ್ಯ" ಎಂಬುದರ ಬದಲು "ಯೆರೆಮೀಯ" ಎಂದು ಬರೆದಿರಬೇಕು. ಅನಂತರದ ನಕಲು ಮಾಡುವವರು ಸ್ಪಷ್ಟವಾದ ತಪ್ಪನ್ನೂ ಸಹ ಸರಿಪಡಿಸಲು ಬಹುಶಃ ಹಿಂಜರಿದರು.

ಕೆಲವು ಪುರಾತನ ಪ್ರತಿಗಳಲ್ಲಿ ನಿಜವಾಗಿಯೂ ಮತ್ತಾಯ 27:9ರಲ್ಲಿ "ಯೆರೆಮೀಯ" ಎಂಬುದಕ್ಕಿಂತ "ಜೆಕರ್ಯ" ಎಂಬುದಾಗಿರುತ್ತವೆ. ಬಹುಶಃ ಇವು ಮತ್ತಾಯನ ಮೂಲ ದಾಖಲೆಯ ಸರಿಯಾದ ಪ್ರತಿಗಳಾಗಿರುವವು. ಇದಲ್ಲದೆ, ಮತ್ತಾಯ 27:9ರಲ್ಲಿ ಮುಂತಿಳಿಸುವಿಕೆಯು "ಪ್ರವಾದಿಯ ಮುಖಾಂತರ" ಮಾಡಲ್ಪಟ್ಟಿತು ಎಂದು ಹೇಳಿ ಪ್ರವಾದಿಯ ಹೆಸರನ್ನು ಹೇಳದಿರುವಂಥ ಪುರಾತನ ಪ್ರತಿಗಳು ಇರುತ್ತವೆ. ಬಹುಶಃ ಈ ಪ್ರತಿಗಳನ್ನು ಮಾಡುತ್ತಿದ್ದವರು ಮತ್ತಾಯನ ಮೂಲ ಹೇಳಿಕೆಯನ್ನು ಅನುಸರಿಸಿದ್ದಿರಬಹುದು. ಈ ವಿವರಣೆಯ ವಿವರವು ಏನೇ ಆಗಿದ್ದರೂ[4] ವಿಶ್ವಾಸ ಘಾತದ ಹಣದೊಂದಿಗೆ ಏನು ಮಾಡಬೇಕೆಂಬುದರ ಪ್ರವಾದಿಯ ಮುಂತಿಳಿಸುವಿಕೆಯು ವಿಶೇಷವಾದದ್ದಾಗಿದೆ.

## ಆತನ ಬಟ್ಟೆಗಳು ಹಂಚಿಕೊಳ್ಳಲ್ಪಟ್ಟವು (ಕೀರ್ತನೆ 22:18)

ಹಳೇ ಒಡಂಬಡಿಕೆಯ ಕೆಲವು ಮುಂತಿಳಿಸುವಿಕೆಗಳಿಗೆ ಎರಡು ಅರ್ಥಗಳಿದ್ದವು - ಸಮೀಪವಾದದ್ದು ಮತ್ತು ದೂರವಾದದ್ದು, ನೇರವಾದದ್ದು ಮತ್ತು ಅಪ್ರತ್ಯಕ್ಷವಾದದ್ದು, ಪ್ರಾಥಮಿಕವಾದದ್ದು ಹಾಗೂ ದ್ವಿತೀಯವಾದದ್ದು. ಇತರವುಗಳಿಗೆ ಯೇಸುವಿನ ಬಗ್ಗೆ ಪ್ರವಾದನೆಯಂತೆ ಮಾತ್ರವೇ ಅರ್ಥವಿದೆ. ಉದಾಹರಣೆಯಾಗಿ, ಕೀರ್ತನೆ 22:18ನ್ನು ಯೋಚಿಸಿರಿ: "ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲುಮಾಡಿಕೊಳ್ಳುತ್ತಾರೆ; ನನ್ನ ಅಂಗಿಗೋಸ್ಕರ ಚೀಟು ಹಾಕುತ್ತಾರೆ." ಈ ಮುಂತಿಳಿಸುವಿಕೆಯು ಅತೀ ಸ್ಪಷ್ಟವಾ

ದವುಗಳಲ್ಲಿ ಒಂದಾಗಿದೆ. ಶಿಲುಬೆಗೆ ಹಾಕುವ ಕಾರ್ಯಾಚರಣೆಯ ಪಡೆಯು ನಾಲ್ಕು ಜನ ಸಿಪಾಯಿಗಳಿಂದ ಕೂಡಿತ್ತು ಎಂಬುದರ ಬಗ್ಗೆ ಮೊದಲೇ ತಿಳುವಳಿಕೆಯಿತ್ತು ಹಾಗೆಯೇ ಯೇಸುವು ಐದು ಉಡುಪುಗಳನ್ನು ಧರಿಸಿರುತ್ತಿದ್ದನು ಎಂಬುದರ ಬಗ್ಗೆ ಮೊದಲೇ ತಿಳುವಳಿಕೆಯಿತ್ತು ಎಂಬುದನ್ನು ತೋರಿಸುವಂತೆ ಕಾಣುತ್ತದೆ. ನಾಲ್ಕು ಉಡುಪುಗಳು ನಾಲ್ಕು ಜನ ಸಿಪಾಯಿಗಳ ಮಧ್ಯದಲ್ಲಿ ಸುಲಭವಾಗಿ ಹಂಚಿಕೊಳ್ಳ ಬಹುದು. ಆದರೆ ಐದನೆಯ ಉಡುಪು ಸಮಸ್ಯೆಯನ್ನು ಮುಂದಿಟ್ಟಿತು. ಅದನ್ನು ನಾಲ್ಕು ಭಾಗವಾಗಿ ವಿಭಾಗಿಸುವುದು ನಾಲ್ಕು ತುಂಡುಗಳನ್ನಾಗಿ ಮಾಡಿ ಧರಿಸಲು ಅಯೋಗ್ಯವಾದದ್ದನ್ನಾಗಿ ಮಾಡುತ್ತಿತ್ತು. ಯಾರಾದರೊಬ್ಬರು ಉಡುಪನ್ನು ಉಪಯೋಗಿಸಲು ಶಕ್ತರಾಗುವಂತೆ ಚೀಟು ಹಾಕುವುದು ಉತ್ತಮವಾದ ಪರಿಹಾರವೆಂದು ಸಿಪಾಯಿಗಳು ಯೋಚಿಸಿದರು ಹಾಗೂ ಅದರಂತೆ ಮಾಡಲ್ಪಟ್ಟಿತು.

> ಸಿಪಾಯಿಗಳು ಯೇಸುವನ್ನು ಶಿಲುಬೆಗೆ ಹಾಕಿದ ಮೇಲೆ ಅವರು ಆತನ ಮೇಲು ಹೊದಿಕೆಗಳನ್ನು ತಕ್ಕೊಂಡು ನಾಲ್ಕು ಪಾಲು ಮಾಡಿ ಒಬ್ಬೊಬ್ಬ ಸಿಪಾಯಿಗೆ ಒಂದೊಂದು ಪಾಲಿನ ಪ್ರಕಾರ ಹಂಚಿಕೊಂಡರು. ಆತನ ಒಳಂಗಿಯನ್ನು ಸಹ ತೆಗೆದು ಕೊಂಡರು; ಆದರೆ ಆ ಅಂಗಿಗೆ ಹೊಲಿಗೆ ಇರಲಿಲ್ಲ, ಅದು ಮೇಲಿನಿಂದ ಅಖಂಡವಾಗಿ ಹೆಣೆದದ್ದಾಗಿತ್ತು. ಅದನ್ನು ನೋಡಿ ಅವರು, "ನಾವು ಇದನ್ನು ಹರಿಯಬಾರದು; ಚೀಟುಹಾಕಿ ಇದು ಯಾರಿಗೆ ಬರುವದೋ ನೋಡೋಣ ಎಂದು ಮಾತಾಡಿಕೊಂಡರು," ಇದರಿಂದ: "ನನ್ನ ಬಟ್ಟೆಗಳನ್ನು ತಮ್ಮಲ್ಲಿ ಪಾಲು ಮಾಡಿಕೊಂಡರು, ನನ್ನ ಅಂಗಿಗೋಸ್ಕರ ಚೀಟುಹಾಕಿದರು ಎಂಬ ಪರುಶುದ್ಧ ಲೇಖನದ ಮಾತು ನೆರವೇರಿತು. ಸಿಪಾಯಿಗಳು ಇದನ್ನೆಲ್ಲಾ ಮಾಡಿದರು" (ಯೋಹಾನ 19:23, 24).

## ಮನುಷ್ಯರಿಂದ ನಿಂದೆ (ಕೀರ್ತನೆ 22:6)

ಕೆಲವು ಸಮಯಗಳಲ್ಲಿ - ಅಳುತ್ತ, ಬರಿಗಾಲಿನಿಂದ ಓಡಿಹೋಗುತ್ತಿದ್ದ ದಾವೀದನ ಕಡೆಗೆ ಶಿಮ್ಮೀ ಎಂಬವನು ಶಪಿಸುತ್ತ ಕಲ್ಲುಗಳನ್ನು ಎಸೆಯುತ್ತಿದ್ದಾಗಿನಂತೆ (2 ಸಮು ವೇಲ 16:5, 6) - ಇಷಯನ ಮಗನು ತಾನೇ "ಮನುಷ್ಯಲಿಂದ ನಿಂದಿಸಲ್ಪಟ್ಟು ಜನಲಿಂದ ತಿರಸ್ಕಾರಹೊಂದಿದ್ದೇನೆ" ಎಂದು ಭಾವಿಸಿದ್ದನು (ಕೀರ್ತನೆ 22:6) ಆತನು ಹೀಗೆ ಹೇಳಿದನು,

> ನನ್ನನ್ನು ನೋಡುವವರೆಲ್ಲರೂ ಹಾಸ್ಯ ಮಾಡುತ್ತಾರೆ;
> ಅವರು ಓರೇ ತುಟಿ ಮಾಡಿ ತಲೆ ಆಡಿಸುತ್ತಾ ,
> "ಯೆಹೋವನು ತನ್ನನ್ನು ರಕ್ಷಿಸುವನೆಂದು ಆತನಲ್ಲಿ
> ಭರವಸೆಯಿಟ್ಟಿದ್ದಾನಲ್ಲಾ;
> ಆತನು ಇವನನ್ನು ಮೆಚ್ಚಿದ್ದಾದರೆ ರಕ್ಷಿಸಲಿ" ಎಂದು ಹೇಳುತ್ತಾರೆ
> (ಕೀರ್ತನೆ 22:7, 8).

ದಾವೀದನು ಪ್ರವಾದಿಸಿದ ವಂಶಜನು ಹಾಗೆಯೇ, "ಮನುಷ್ಯಲಿಂದ ನಿಂದಿಸಲ್ಪಟ್ಟವನೂ ಜನಲಿಂದ ತಿರಸ್ಕಾರ ಹೊಂದಿದವನೂ" ಆಗಿದ್ದನು. ಆತನು ಶಿಲುಬೆಗೆ ಹಾಕಲ್ಪಟ್ಟಾಗ ಇದು ನೆರವೇರಿತು:

> ಅಲ್ಲಿ ಹಾದೂ ಹೋಗುವವರು ತಲೇ ಆಡಿಸಿ, "... ದೇವರ ಮಗನಾಗಿದ್ದರೆ ಶಿಲುಬೆಯಿಂದ ಇಳಿದು ಬಾ" ಎಂದು ಆತನನ್ನು ಹಂಗಿಸುತ್ತಿದ್ದರು." ಅದೇ ಮೇರೆಗೆ ಮಹಾಯಾಜಕರೂ ಶಾಸ್ತ್ರಿಗಳೂ ಹಿರಿಯರೂ, "ಅವನು ಮತ್ತೊಬ್ಬರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಿಕೊಳ್ಳಲಾರನು. ಅವನು ಇಸ್ರಾಯೇಲಿನ ಅರಸನಲ್ಲವೇ. ಈಗ ಶಿಲುಬೆಯಿಂದ ಇಳಿದು ಬರಲಿ, ಇಳಿದು ಬಂದರೆ ಅವನಲ್ಲಿ ನಂಬಿಕೆಯಿಟ್ಟೇವು. ದೇವರಲ್ಲಿ ಭರವಸವಿಟ್ಟಿದ್ದಾನೆ, ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ; ತಾನು 'ದೇವರ ಕುಮಾರನಾಗಿದ್ದೇನೆಂದು' ಹೇಳಿದನಲ್ಲಾ" ಎಂದು ಹಾಸ್ಯದಿಂದ ಮಾತಾಡುತ್ತಿದ್ದರು (ಮತ್ತಾಯ 27:39-43).

## ಬಾಯಾರಿದಾತನು (ಕೀರ್ತನೆ 69:21)

ದುಃಖಕರವಾದ ಹಿಂಸೆಯ ಸಮಯದಲ್ಲಿ, ದಾವೀದನು ಸಹಾಯಕರಿಗಾಗಿ ವ್ಯರ್ಥವಾಗಿ ನೋಡಿದನು. ಅವನು ಹಸಿವೆಯಿಂದಿರುವಂತೆ ವೈರಿಗಳು ಮಾಡಿದ್ದರು. ಹಾಗೂ ಅವನು ಬಾಯಾರಿಕೆಯಿಂದ ಇದ್ದನು. ಅಪಹಾಸ್ಯವಾಗಿ, ಅವನಿಗೆ *baruth* ಅಂದರೆ ಶೋಕಿಸುವವರಿಗೆ ಕೊಡಲ್ಪಡುವ ಆಹಾರವು ಕೊಡಲ್ಪಟ್ಟಿತು; ಆದರೆ ಅದು ಕಹಿಯಾದ ವಸ್ತುವನ್ನೊಳಗೊಂಡಿತ್ತು. ಮಾನವರು ಎಷ್ಟು ಕ್ರೂರರಾಗಿರುವರಲ್ಲವೇ! ಆಗ, ನೀರಿನ ಬದಲು ಅವನಿಗೆ ಹುಳಿತ ದ್ರಾಕ್ಷಾರಸ ಕೊಟ್ಟರು: "ನನಗೆ ಉಣ್ಣುವದಕ್ಕೆ ಕಹಿಯಾದ ವಸ್ತುವನ್ನೂ ಬಾಯಾರಿದಾಗ ಹುಳಿತ ದ್ರಾಕ್ಷಾರಸವನ್ನೂ ಕೊಟ್ಟರು" (ಕೀರ್ತನೆ 69:21).

ಇನ್ನೊಂಬ್ಬ ಹಿಂಸೆಹೊಂದಿದಾತನು, ನಜರೇತಿನ ಯೇಸುವು, ಹಾಗೆಯೇ ಶಿಲುಬೆಯ ಮೇಲೆ ಬಿಡಲ್ಪಟ್ಟಾಗ ಆದರಿಸುವವರು ಇಲ್ಲದೇ ಇದ್ದನು. ಸಹಜವಾಗಿ, ಆತನು ನೇತಾಡುತ್ತಿದ್ದಾಗ ಸ್ವಲ್ಪ ಸಮಯದ ನಂತರ (ಸುಮಾರು ಬೆಳಿಗ್ಗೆ ಒಂಭತ್ತು ಗಂಟೆಗೆ), ಸೆಥಿಸುವ ದ್ರಾಕ್ಷಾರಸವು ಆತನಿಗೆ ಕೊಡಲ್ಪಟ್ಟಿತು. ಅದು ಅಪಹಾಸ್ಯಕ್ಕಾಗಿ ಹಿಂಸಿಸುತ್ತಿದ್ದವರಿಂದ ಕೊಡಲ್ಪಟ್ಟಿತು; ಅದು ಕಹಿಯಾಗುವಂತೆಯೂ ಕುಡಿಯಲಿಕ್ಕೆ ಆಗದಂತೆಯೂ ರಕ್ತಬೋಳದಿಂದ ಬೆರಿಸಲ್ಪಟ್ಟಿತು (ಮಾರ್ಕ 15:23). ಕುಡಿಯಲಿಕ್ಕೆ ಯೇಸು ನಿರಾಕರಿಸಿದ್ದು ಆಶ್ಚರ್ಯಕರವಾದದ್ದಾಗಿರಲಿಲ್ಲ. ದಾವೀದನನ್ನು ಹಿಂಸಿಸಿದವರಂತೆ, ಆತನನ್ನು ಶಿಲುಬೆಗೆ ಹಾಕಿದವರು ಅಮಾನುಷಕರಾಗಿದ್ದು, ಆತನ ಗಾಯಗಳಿಗೆ ಉಪ್ಪು ಸುರಿದಂತೆ ಆತನ ಶ್ರಮೆಯನ್ನು ಇನ್ನಷ್ಟು ತೀವ್ರಗೊಳಿಸಿದರು.

ಆರು ತಾಸುಗಳು ದಾಟಿದವು. ಸುಮಾರು ಮಧ್ಯಾಹನ್ನ ಮೂರು ಗಂಟೆಯ ಸಮಯದಲ್ಲಿ, ಯೇಸುವು ತಾನು ಸಾಯಲಿಕ್ಕಿದ್ದನು ಎಂದು ತಿಳಿದುಕೊಂಡನು (ಯೋಹಾನ 19:28). ಕೀರ್ತನೆ 69:21ರ ಆ ಭಾಗವು ನೆರವೇರಿಲ್ಲವೆಂದು ತಿಳಿದುಕೊಂಡನು: "ಬಾಯಾರಿದಾಗ ಹುಳಿತ ದ್ರಾಕ್ಷಾರಸವನ್ನು ಕುಡಿಯುವದಕ್ಕೆ ಕೊಟ್ಟರು." ಆತನು ಕಹಿಯಾದದ್ದನ್ನು ಸ್ವೀಕರಿಸಿದನು ಆದರೆ ಹುಳಿತ ದಾಕ್ಷಾರಸವನ್ನು ಸ್ವೀಕರಿಸಿದ್ದಿಲ್ಲ. ಆದುದರಿಂದ, "ಪರಿಶುದ್ಧ ಬರಹವನ್ನು ನೆರವೇರಿಸುವಂತೆ" (ಯೋಹಾನ 19:28) ಯೇಸುವು, "ನನಗೆ ನೀರಡಿಕೆ ಆಗಿದೆ" ಎಂದು ಗಟ್ಟಿಯಾಗಿ ಹೇಳುವದರಿಂದ ತನಗೆ ಕುಡಿಯುವದಕ್ಕೆ ಕೊಡಲು ಬರುವಂತೆ ಒಬ್ಬನನ್ನು ಪ್ರೇರೇಪಿಸಿದನು. ಸ್ಪಂಜನ್ನು ಹುಳಿರಸದಿಂದ ತುಂಬಿಸಿ ಯೇಸುವಿನ ಬಾಯಿಗೆ ಮುಟ್ಟಿಸಿದರು. ಕಡಿಮೆ ಬೆಲೆಯ ಹುಳಿರಸವೆಂದು ಕರೆಯಲ್ಪಡುವ ದ್ರಾಕ್ಷಾರಸವು ಆತನಿಗೆ ಕೊಡಲ್ಪಟ್ಟಿತು. ಸ್ಪಂಜಿನಿಂದ ಅದನ್ನು ಹೀರಿಕೊಂಡ ನಂತರ ಆತನ ತುಟಿಗಳಿಂದ ಆತನ ಕೊನೆಯ ಮಾತುಗಳು

ಬಂದವು: "ತೀರಿತು"; "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ" (ಯೋಹಾನ 19:30; ಲೂಕ 23:46).

## ದೇವರ ಚಿತ್ತವನ್ನು ಮಾಡುವಾತನು (ಕೀರ್ತನೆ 40:6-8)

ಪ್ರಾಣಿ ಯಜ್ಞಗಳನ್ನು ಕೊಡಬೇಕೆಂದು ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು (ಯಾಜಕಕಾಂಡ 16). ಆರಾಧಕರು ದೇವರನ್ನು ಪ್ರೀತಿಸಿದಾಗ (ಧರ್ಮೋಪದೇಶ ಕಾಂಡ 10:12, 13) ಹಾಗೂ ತಮ್ಮ ನೆರೆಯವರನ್ನು ಪ್ರೀತಿಸಿದಾಗ (ಯಾಜಕಕಾಂಡ 19:18; ನೋಡಿರಿ ಮೀಕ 6:6-8) ಇವುಗಳನ್ನು ದೇವರು ಮೆಚ್ಚಿಕೆಯಿಂದ ನೋಡಿದನು (ಕೀರ್ತನೆ 51:19). ಹಾಗಿದ್ದರೂ ವೈಯಕ್ತಿಕ ಪ್ರೀತಿಯಿಲ್ಲದ ಯಾವುದೇ ಪ್ರಾಣಿ ಯಜ್ಞವು ಸಮರ್ಪಣೆ, ಶುದ್ಧತೆ ಹಾಗೂ ದೀನತೆಯಿಲ್ಲದ್ದು ಇಸ್ರಾಯೇಲಿನ ಪರಿಶುದ್ಧಾತ್ಮನಿಗೆ ಅಸಹ್ಯವಾದದ್ದಾಗಿತ್ತು (ಕೀರ್ತನೆ 51:16, 17; ಯೆಶಾಯ 1:11-17; ಯೆರೆಮೀಯ 6:20; 7:22, 23; ಆಮೋಸ 5:22-24). ಪ್ರಾಣಿಯ ಮತ್ತು ಆರಾಧಕನ ಇಬ್ಬರ ಸಂಪೂರ್ಣ ಸಮರ್ಪಣೆಯ ಮಹಾತತ್ವವು ಕೀರ್ತನೆ 40:6-8ರ ಮೂಲ ರಚನೆಯನ್ನು ವಿವರಿಸುವುದು:

> ಯಜ್ಞ ನೈವೇದ್ಯಗಳು ನಿನಗೆ ಇಷ್ಟವಲ್ಲ;
> ಸರ್ವಾಂಗ ಹೋಮಗಳನ್ನಾಗಲಿ ದೋಷಪರಿಹಾರಕ
> ಯಜ್ಞಗಳನ್ನಾಗಲಿ ನೀನು ಅಪೇಕ್ಷಿಸುವದಿಲ್ಲ.
> ಆದರೆ ಶ್ರವಣ ಶಕ್ತಿಯನ್ನು ನನಗೆ ಅನುಗ್ರಹಿಸಿದೆ.
> ಆಗ ನಾನು, "ಇಗೋ ಇದ್ದೇನೆ;
> ನನ್ನನ್ನು ಕುರಿತು ಗ್ರಂಥದ ಸುರುಳಿಯಲ್ಲಿ ಬರೆದದೆ:
> ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವುದೇ ನನ್ನ ಸಂತೋಷವು;
> ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ" ಅಂದೆನು.

ವೈಯಕ್ತಿಕ ಶುದ್ಧತೆ ಮತ್ತು ಪ್ರತಿಷ್ಠೆಯಿಲ್ಲದ ಯಜ್ಞ ನೈವೇದ್ಯಗಳನ್ನು ದೇವರು ಅಪೇಕ್ಷಿಸಲಿಲ್ಲ. ಯಥಾರ್ಥತೆಯಿಲ್ಲದ, ಕಪಟತನದ ಆರಾಧಕರಿಂದ ಸರ್ವಾಂಗ ಹೋಮಗಳನ್ನಾಗಲೀ, ದೋಷಪರಿಹಾರಕ ಯಜ್ಞಗಳಾಗಲೀ ಆತನ ಕೇಳುವಿಕೆಗಳನ್ನು ಪೂರೈಸುವದಿಲ್ಲ. ಈಗಿದ್ದಂತೆ, ಆಗ, ದೇವರು ಪ್ರತಿಯೊಬ್ಬ ಆರಾಧಕನು ಹೃದಯದಿಂದ ತನ್ನನ್ನು ಕೊಡುವದನ್ನು ಬಯಿಸಿದ್ದನು.

ಕೀರ್ತನೆ 40ರಲ್ಲಿ ವರ್ಣಿಸಲ್ಪಟ್ಟಾತನು, "ಇಗೋ, ನಾನು ಬರುತ್ತೇನೆ" ಎಂದು ಹೇಳಿದ್ದಾನೆ. ಆ ಆಂತರಿಕ ತೀರ್ಮಾನವು ಧರ್ಮಶಾಸ್ತ್ರದ ಪುಸ್ತಕದಲ್ಲಿ ಬರೆಯಲ್ಪಟ್ಟಿದೆ ಮತ್ತು ಆಜ್ಞಾಪಿಸಲ್ಪಟ್ಟಿದೆ (ಧರ್ಮೋಪದೇಶಕಾಂಡ 10:12, 13; 30:9, 10). ಯೋಗ್ಯವಾಗಿ ಪ್ರೇರೇಪಿಸಲ್ಪಟ್ಟು, ತೆರೆದ ಹೃದಯದಿಂದಲೂ ಬಾಯಿಯಿಂದಲೂ ಅವನು ತಾನೇ ಹೀಗೆ ಹೇಳಿದ್ದಾನೆ: "ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ." ದಾವೀದನು, ಅಂಥ ಆರಾಧಕನಾಗಿ ಮತ್ತು ಕೀರ್ತನೆ 40ನ್ನು ಬರೆದವನಾಗಿ, ಪ್ರಾಣಿಗಳಿಗಿಂತ ಹೆಚ್ಚಿನದನ್ನು ದೇವರಿಗೆ ಸಮರ್ಪಿಸಿದ್ದಾನೆ.

ಹಾಗಿದ್ದರೂ, ಯಥಾರ್ಥತೆಯೊಂದಿಗೆ ಸಹ ಪ್ರಾಣಿ ಸಮರ್ಪಣೆಗಳು ನಿಜವಾಗಿಯು ಪಾಪವನ್ನು ತೆಗೆದು ಹಾಕಲಾರವು (ಇಬ್ರಿಯ 10:3, 4). ಅವು ನ್ಯಾಯತೀರ್ವಿಕೆಯ

ಲೆಕ್ಕಾಚಾರದ ದಿನವನ್ನು ಮುಂದೆ ಹಾಕಬಹುದು (ಇಬ್ರಿಯ 10:1, 2), ಆದುದರಿಂದ ಇಡೀ ಜಗತ್ತಿನ ಅಂತಿಮ ಸ್ಥಿತಿಯು ಕೀರ್ತನೆ 40:6-8ರ ಉನ್ನತವಾದ ಅರ್ಥದ ಮೇಲೆ ನಿಂತಿರುತ್ತದೆ. ಕ್ರಿಸ್ತನು ದೇವರ ಚಿತ್ತವನ್ನು ಶುದ್ಧತೆಯಲ್ಲಿಯೂ ಯಥಾರ್ಥತೆಯಲ್ಲಿಯೂ ಮಾಡಿದ್ದಲ್ಲದೇ ಹೆಚ್ಚಾದದ್ದನ್ನೂ ಮಾಡಿದನು: ಆತನು ಮಾನವ ದೇಹವನ್ನು ಅರ್ಪಿಸಿದನು (ಇಬ್ರಿಯ 10:5).

ಹಳೇ ಒಡಂಬಡಿಕೆಯ ಯಾವುದೇ ಆರಾಧಕನು ಎಂದಾದರೂ ಕಲ್ಪಿಸಿದ್ದಕ್ಕಿಂತ ಭಿನ್ನವಾದ ಮತ್ತು ಉನ್ನತವಾದ ಅರ್ಥದಲ್ಲಿ ಯೇಸುವು ನಮ್ಮ ಯಜ್ಞವಾಗಿರಲು ಒಪ್ಪಿಕೊಂಡನು. ಜಗದುತ್ಪತ್ತಿಗೆ ಮೊದಲೇ (ನೋಡಿರಿ 1 ಪೇತ್ರ 1:18-20), ಆತನು ತನ್ನ ತಂದೆಗೆ, "ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ. ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ" ಎಂದು ಹೇಳಿದನು (ಇಬ್ರಿಯ 10:7). ಯೇಸುವಿಗಾಗಿ ಮಾನವ ಶರೀರವು ಸಿದ್ಧಪಡಿಸಲ್ಪಟ್ಟಾಗ, ಆತನು ಅದನ್ನು ಸಂತೋಷದಿಂದ ಶಿಲುಬೆಯ ಮೇಲೆ ಸಮರ್ಪಿಸಿದನು. ಸಂತೋಷಕರವಾದ ಪರಿಣಾಮವು ಈಗ ಕ್ರೈಸ್ತರು ಹೀಗೆ ಹೇಳುತ್ತ ಆನಂದಿಸಬಹುದು: "ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆ ಮಾಡಿ ದೇವರ ಚಿತ್ತವನ್ನು ನೆರವೇರಿಸಿದದರಿಂದಲೇ ನಾವು ಶುದ್ಧರಾದೆವು" (ಇಬ್ರಿಯ 10:10).

## ಸರ್ಪದ ತಲೆಯನ್ನು ಜಜ್ಜುವಾತನು (ಆದಿಕಾಂಡ 3:15)

"ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಹಿಮ್ಮಡಿಯನ್ನು ಕಚ್ಚುವಿ" (ಆದಿಕಾಂಡ 3:15ಬಿ) ಎಂದು ದೇವರು ಹೇಳಿದಾಗ ಸ್ತ್ರೀಯ ಸಂತಾನವನ್ನು ಕುರಿತು ಸರ್ಪಕ್ಕೆದೇವರು ಮಾತಾಡುತ್ತಿದ್ದನು. ಇಲ್ಲಿ ಅರ್ಥವು ಸರ್ಪಗಳ ಮತ್ತು ಮಾನವರ ಮಧ್ಯದಲ್ಲಿ ಸ್ವಾಭಾವಿಕವಾದ ವೈರತ್ವವೆಂಬ ಅರ್ಥವು ಯೋಗ್ಯವಾಗಿದೆಯೆಂದು ತೋರುವದಿಲ್ಲ. ಸರ್ಪವು ಸೈತಾನನ ಪರವಾಗಿ ಮಾತನಾಡುವವನೆಂಬುದು ಸ್ಪಷ್ಟವಾಗಿ ತೋರುತ್ತದೆ "ಭೂಲೋಕದವರನ್ನೆಲ್ಲಾ ಮರುಳು ಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪನು" (ಪ್ರಕಟನೆ 12:9). ಇದು ಹೀಗಿರುವಲ್ಲಿ, ಸೈತಾನನ ಮತ್ತು ಸ್ತ್ರೀಯ ಸಂತತಿಯ ಮಧ್ಯದಲ್ಲಿ ಹೋರಾಟವನ್ನು ದೇವರು ಮುಂತಿಳಿಸುವಂಥದ್ದಾಗಿದೆ. ಸ್ತ್ರೀ ಸಂತತಿಯ ಮೊದಲನೆಯ ಉದಾಹರಣೆಯಾದ ಕಾಯಿನನು ಸೈತಾನನೊಂದಿಗೆ ಹೋರಾಟದಲ್ಲಿ ಪ್ರವೇಶಿಸಲಿಲ್ಲ. ಅದರ ಬದಲು, ಕಾಯಿನನು ಸೈತಾನನಿಗೆ ಒಪ್ಪಿಸಿಕೊಟ್ಟನು. ತನ್ನ ಮೇಲೆ ಸೈತಾನ ಮತ್ತು ಪಾಪ ಆಳುವಂತೆ ಬಿಟ್ಟನು (ಆದಿಕಾಂಡ 4:7). ಕಾಯಿನನು ದುಷ್ಟನವನಾಗಿದ್ದನು (1 ಯೋಹಾನ 3:12); ಅದರ ಪರಿಣಾಮವಾಗಿ ಸರ್ಪನ ತಲೆಯನ್ನು ಜಜ್ಜಲಿಕ್ಕೆ ಮುಂತಿಳಿಸಲ್ಪಟ್ಟ ಸ್ತ್ರೀಯ ಸಂತಾನವಾಗಲಿಲ್ಲ.

ಸ್ತ್ರೀಯ ಸಂತಾನದ ಎರಡನೆಯ ಉದಾಹರಣೆಯಾದ ಹೆಬೆಲನು ಈ ಜಗತ್ತನ್ನು ಮೋಸಪಡಿಸುವವನೊಂದಿಗೆ ಆತ್ಮಿಕ ಹೋರಾಟದಲ್ಲಿ ಪ್ರವೇಶಿಸಿದನು ಮತ್ತು ಜಯಶಾಲಿಯಾಗಿ ಎದ್ದು ಬಂದನು. ಸರ್ಪದ ಆತ್ಮಿಕ ತಲೆಯನ್ನು ಅವನು ಜಜ್ಜಿದನು; ತನ್ನ ಸ್ವಂತ ದೈಹಿಕ ಜೀವವನ್ನು ಕಳೆದು ಕೊಂಡನು. ಬಹುಶಃ ಅವನು ತನ್ನ ಸ್ವಂತ ದೈಹಿಕ ಜೀವವನ್ನು ಕಳೆದು ಕೊಂಡದ್ದು ಸ್ತ್ರೀಯ ಸಂತತಿಯ ಹಿಮ್ಮಡಿಯನ್ನು ಸೈತಾನನು ಕಚ್ಚುವ ಅರ್ಥವಾಗಿದೆ. ಹೇಬೆಲನು ಸ್ತ್ರೀಯ "ದೈವಿಕ ಸಂತಾನ"ವಾಗಿದ್ದನು (ನೋಡಿರಿ ಮಲಾಕಿಯ 2:15).

ದೇವರಿಗಾಗಿ ಒಬ್ಬ ವ್ಯಕ್ತಿಯ ಜೀವಿಸುವಿಕೆಯ ಹಾಗೂ ಸೈತಾನನನ್ನು ವಿರೋಧಿಸುವ, ಪ್ರಗತಿಯಲ್ಲಿ ಶ್ರಮೆಯನ್ನು ಅನುಭವಿಸುವ ಪ್ರತಿಯೊಂದು ಉದಾಹರಣೆಯು ಭಾಗಶಃವಾಗಿ ಆದಿಕಾಂಡ 3:15ರ ನೆರವೇರಿಕೆಯಂತೆ ತೋರುತ್ತದೆ. ಹಾಗಿದ್ದರೂ ಅಂಥ ಜಯಶಾಲೀ ಜೀವನದ ಹೆಚ್ಚು ಅರ್ಥಗರ್ಭಿತವಾದ ಉದಾಹರಣೆಯು ಯೇಸುವಾಗಿದ್ದಾನೆ. ಸ್ತ್ರೀಯಿಂದ ಜನಿಸಿದವನಾಗಿ (ಗಲಾತ್ಯ 4:4), ಆತನು ಹವ್ವಳ ವಂಶಜನಾಗಿದ್ದನು (ಲೂಕ 3:23-38; ನೋಡಿರಿ ಆದಿಕಾಂಡ 3:20). ಅದರಲ್ಲಿ ಆತನು ದೈಹಿಕ ಮರಣ ಅನುಭವಿಸಿದನು, ಸೈತಾನನು ಆತನ ಹಿಮ್ಮಡಿಯನ್ನು ಕಚ್ಚಿದನೆಂದು ಹೇಳಬಹುದು. ಮರಣದ ಬಲವುಳ್ಳವನನ್ನು ಅಂದರೆ ಸೈತಾನನ್ನು ಯೇಸುವು ನಾಶಪಡಿಸಿದನು (ಇಬ್ರಿಯ 2:14). ಇಂದು ಯೇಸುವು ಮರಣದ ಹಾಗೂ ಪಾತಾಳದ ಬೀಗದ ಕೈಗಳನ್ನು ಹಿಡಿದು ಕೊಂಡಿರುವನು (ಪ್ರಕಟನೆ 1:18). ಸರ್ಪನ ತಲೆಯನ್ನು ಜಜ್ಜುವದರಿಂದ, ಆತನು ಮರಣವನ್ನು ತೆಗೆದುಹಾಕಿ ಸುವಾರ್ತೆಯ ಮುಖಾಂತರ ಜೀವವನ್ನೂ ಅಮರತ್ವವನ್ನೂ ತಂದಿದ್ದಾನೆ (2 ತಿಮೊಥೆ 1:10).

ನೀತಿವಂತ ವ್ಯಕ್ತಿಯ ಪ್ರತಿಯೊಂದು ಉದಾಹರಣೆಯು ಸೈತಾನನ ತಲೆಯ ಆತ್ಮಿಕ ಜಜ್ಜುವಿಕೆಯಾಗಿದೆ, ಆದರೆ ಯೇಸು ಮಾತ್ರವೇ ಮರಣವನ್ನು ಜಜ್ಜಿದನು. ಈ ಅರ್ಥದಲ್ಲಿ, ಯೇಸು ಮಾತ್ರವೇ ಆದಿಕಾಂಡ 3:15ನ್ನು ನೆರವೇರಿಸಬಲ್ಲನು ಎಂದು ಹೇಳಬಹುದು, ಈ ವಿಷಯದಲ್ಲಿ ಯೇಸುವಿನ ಅದ್ವಿತೀಯತೆಯ ಕಾರಣದಿಂದ, ಬೈಬಲ್ ಪಂಡಿತರು ಬಹಳ ಹಿಂದೆಯೇ "protevangelium," ಬರಲಿಕ್ಕಿದ್ದ ಮೆಸ್ಸೀಯನ ಮೊದಲ ಸಾರುವಿಕೆಯಾಗಿದೆಯೆಂದು ತಿಳಿದು ಕೊಂಡಿದ್ದಾರೆ. ಯಾವುದೇ ಹೊಸ ಒಡಂಬಡಿಕೆಯ ಬರಹಗಾರನು ಆದಿಕಾಂಡ 3:15ನ್ನು ಯೇಸುವಿಗೆ ನೇರವಾಗಿ ಅನ್ವಯಿಸದಿದ್ದರೂ, ಅದರ ನಿರೀಕ್ಷೆಯ ಉಸಿರು ಅದನ್ನು ಆಶ್ಚರ್ಯಕರವಾದ ವಾಕ್ಯವನ್ನಾಗಿ ಮಾಡುತ್ತದೆ. ಅದು ಸೈತಾನನ ಮೇಲೆ ದೃಢವಾದ ಜಯದ ಮುಂತಿಳಿಸಲ್ಪಡುವ ನಿರೀಕ್ಷೆಯನ್ನು ಕೊಡುತ್ತದೆ. "ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು" (1 ಯೋಹಾನ 3:8).

## ಜಯಶಾಲಿಯಾಗಿ ಪಾಪ - ಹೊತ್ತುಕೊಂಡು ಹೋಗುವವನು (ಯೆಶಾಯ 53)

ನಿಜವಾಗಿಯೂ ಎಂಟು ಶತಮಾನಗಳ ಮುಂಚಿತವಾಗಿಯೇ ಯೆಶಾಯನು ಯೇಸುವಿನ ಮಹಿಮೆಯನ್ನು ನೋಡಿದನು ಮತ್ತು "ಆತನ ಬಗ್ಗೆ ಮಾತಾಡಿದನು" (ಯೋಹಾನ 12:41). ಯೆಶಾಯ 53ರಲ್ಲಿಯ ವಿವರದ ಸ್ಪಷ್ಟತೆಯು ವಾಚಕರು ತಾವು ಚರಿತ್ರೆಯ ಕಡೆಗೆ ನೋಡುತ್ತಿರುವರು, ಪ್ರವಾದನೆಯ ಕಡೆಗೆ ಅಲ್ಲ ಎಂದು ಯೋಚಿಸುವಂತೆ ಮಾಡುತ್ತದೆ. ಅಧ್ಯಾಯದ ಹೇಳಿಕೆಗಳಿಗೆ ಹೊಂದಿಸಲು ಅವಿಶ್ವಾಸಿಗಳು ಪರಲೋಕವನ್ನೂ ಭೂಲೋಕವನ್ನೂ ಜೀವಿಸುವವರನ್ನೂ ಸತ್ತವರನ್ನೂ ಯಾರನ್ನಾದರೂ (ಮೋಶೆ, ಉಜ್ಜೀಯ, ಯೆರುಬ್ಬಾಬೇಲ, ಯೆರೆಮೀಯ, ಚಿದ್ಕೀಯ, ಯೆಶಾಯ, ಯೆಹೋಯಾಕೀನು ಮತ್ತು ಇಸ್ರಾಯೇಲನನ್ನೊಲಗೊಂಡು) ಹುಡುಕಿದ್ದಾರೆ; ಯೇಸುವನ್ನು ಬಿಟ್ಟು ಬೇರೆ ಯಾರೂ ಹೊಂದಿ ಕೊಳ್ಳುವದಿಲ್ಲ. ಇದಲ್ಲದೆ, ಯೆಶಾಯ 53 ತನ್ನ ಬಗ್ಗೆ ಹೇಳುವಂತೆ ಮಾಡಲಿಕ್ಕೆ ತನ್ನ ಜೀವಿತವನ್ನು ಉದ್ದೇಶ ಪೂರ್ವಕವಾಗಿ ವ್ಯವಸ್ಥಿತವಾಗಿಡಲು ಯಾರಿಗೂ ಸಾಧ್ಯವಾಗುವದಿಲ್ಲ. ಯೇಸುವನ್ನು ಅಷ್ಟು ಸ್ಪಷ್ಟವಾಗಿ ನೋಡಿದ ಪ್ರವಾದಿ ಯಿಂದ ಆಶ್ಚರ್ಯಕರವಾದ ವಿವರಣೆಗಳು ಮುಂತಿಳಿಸಲ್ಪಟ್ಟಿವೆ:

1. ಧಿಕ್ಕರಿಸಲ್ಪಟ್ಟನು
   (53:3; ನೋಡಿರಿ ಮತ್ತಾಯ 27:39-43)
2. ಸಂಕಷ್ಟಕ್ಕೊಳಗಾದವನು
   (53:3; ನೋಡಿರಿ ಮತ್ತಾಯ 26:38)
3. ದುಃಖಕ್ಕೆ ಒಳಗಾದವನು
   (53:3; ನೋಡಿರಿ ಇಬ್ರಿಯ 4:15)
4. ತನ್ನ ಜನರಿಂದ ಸ್ವೀಕರಿಸಲ್ಪಡದವನು
   (53:3; ನೋಡಿರಿ ಯೋಹಾನ 1:10, 11)
5. ಇತರರಿಗಾಗಿ ತೊಂದರೆಗಳನ್ನು ಸಹಿಸುವಾತನು
   (53:4; ನೋಡಿರಿ ಮತ್ತಾಯ 8:16, 17).
6. ವಂಚನೆಯು ಇಲ್ಲದವನು
   (53:9; ನೋಡಿರಿ 1 ಪೇತ್ರ 2:22)
7. ತನ್ನನ್ನು ಹಿಂಸಿಸುವವರ ಮುಂದೆ ಮೌನವಾಗಿದ್ದನು
   (53:7; ನೋಡಿರಿ ಮತ್ತಾಯ 26:63; 27:12, 14)
8. ಇತರರಿಗಾಗಿ ಬಾಸುಂಡೆಗಳನ್ನು ಸಹಿಸುವಾತನು
   (53:5, ನೋಡಿರಿ 1 ಪೇತ್ರ 2:24, 25)
9. ಇತರರಿಗಾಗಿ ಪಾಪ - ಹೊತ್ತುಕೊಂಡು ಹೋಗುವವನು
   (53:5, 12; ನೋಡಿರಿ 1 ಕೊರಿಂಥ 15:3; 2 ಕೊರಿಂಥ 5:21; ಇಬ್ರಿಯ 9:28; ರೋಮಾಪುರ 4:25)
10. ದ್ರೋಹಿಗಳೊಂದಿಗೆ ಎಣಿಸಿಕೊಂಡನು
    (53:12; ಲೂಕ 22:37)
11. ದ್ರೋಹಿಗಳಿಗಾಗಿ ವಿಜ್ಞಾಪನೆ ಮಾಡುವಾತನು
    (53:12; ನೋಡಿರಿ ಲೂಕ 23:34)
12. ನ್ಯಾಯವನ್ನು ಹೊಂದಲಿಲ್ಲ
    (53:8; ನೋಡಿರಿ ಮತ್ತಾಯ 27:24)
13. ಐಶ್ವರ್ಯವಂತರೊಂದಿಗೆ ಹೂಣಲ್ಪಟ್ಟನು
    (53:9; ನೋಡಿರಿ ಮತ್ತಾಯ 27:57-60)
14. ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು
    (53:10; ನೋಡಿರಿ ಮಾರ್ಕ 16:9)
15. ದೊಡ್ಡವನಂತೆ ಮೇಲಕ್ಕೇರಿಸಲ್ಪಟ್ಟನು ಹಾಗೂ ಗೌರವಿಸಲ್ಪಟ್ಟನು
    (53:12; ನೋಡಿರಿ ಫಿಲಿಪ್ಪಿ 2:9-11)

ಯೆಶಾಯ 53ರಲ್ಲಿ ಪ್ರವಾದಿಯು ತನ್ನ ಬಗ್ಗೆ ಮಾತಾಡುತ್ತಿರುವನೋ ಇಲ್ಲವೇ ಬೇರೊಬ್ಬನ ಬಗ್ಗೆ ಮಾತಾಡುತ್ತಿರುವನೋ ಎಂದು ಐತಿಯೋಪ್ಯದ ಸರಕಾರಿ ಅಧಿಕಾರಿಯು ಫಿಲಿಪ್ಪನನ್ನು ಕೇಳಿದನು. ಸುವಾರ್ತಿಕನ ಉತ್ತರವನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗಿದೆ: "ಫಿಲಿಪ್ಪನು ಉಪದೇಶಿಸುವದಕ್ಕೆ ತೊಡಗಿ ಅದೇ ವಚನವನ್ನು ಆಧಾರಮಾಡಿಕೊಂಡು ಅವನಿಗೆ ಯೇಸುವಿನ ವಿಷಯವಾಗಿ ಸುವಾರ್ತೆಯನ್ನು ತಿಳಿಸಿದನು" (ಅಪೊಸ್ತಲರ ಕೃತ್ಯ 8:35). ಬೇರೆ ಯಾರ ಬಗ್ಗೆಯೂ ಪ್ರಸಂಗಿಸಲು ಅವನು ತನ್ನ ಬಾಯಿತೆರೆದು ಈ ಪರಿಶುದ್ಧಬರಹವನ್ನು ಉಪಯೋಗಿಸಲಿಲ್ಲ.

## ಜಯಶಾಲಿಯಾದಾತನು (ಕೀರ್ತನೆ 68:18)

ದಾವೀದನು, ಕೀರ್ತನೆ 68:18ಎ ದ ಸುಂದರವಾದ, ಅಲಂಕಾರಿಕ ಭಾಷೆಯಲ್ಲಿ ದೇವರನ್ನು ಜಯಿಸುವ ಅರಸನಂತೆ ಚಿತ್ರಿಸಿದನು. ಅವನು ಈ ಅರಸನನ್ನು ಗೌರವದ ಅತ್ಯುನ್ನತ ಸ್ಥಾನಕ್ಕೆ ಏರುತ್ತಿರುವವನಂತೆ, ಯುದ್ಧದ ಕೈದಿಗಳನ್ನು ನಡಿಸುತ್ತಿರುವವನಂತೆ ಹಾಗೂ ತನ್ನನ್ನು ಮೆಚ್ಚಿಕೊಳ್ಳುವವರಿಂದ ಕಾಣಿಕೆಗಳನ್ನು ಸ್ವೀಕರಿಸುತ್ತಿರುವವನಂತೆ ವರ್ಣಿಸಿದ್ದಾನೆ:

> ನೀನು ಉನ್ನತಸ್ಥಾನಕ್ಕೆ ಏರಿದ್ದೀ,
> ನೀನು ಸೆರೆ ಹಿಡಿದವರನ್ನು ನೀನು ನಡಿಸಿದ್ದೀ;
> ನೀನು ಜನರ ಮಧ್ಯದಲ್ಲಿ ಕಾಣಿಕೆಗಳನ್ನು ಸ್ವೀಕರಿಸಿದ್ದೀ.

ಅದೇ ರೀತಿಯಲ್ಲಿ, ಯೇಸುವು, ಸಮಾಧಿಯೊಳಗೆ ಇಳಿದು, ಜಯಶಾಲಿಯಾಗಿ ಎದ್ದು ಬಂದು, ಮರಣವನ್ನೂ ಪಾತಾಳವನ್ನೂ ಹಾಗೂ ಸಮಾಧಿಯನ್ನೂ ತನ್ನ ಸೆರೆಯಾಳುಗಳಂತೆ ನಡಿಸಿದನು. ಜಗತ್ತಿನ ಅತೀ ನಿಶ್ಚಿತವಾದ ಹೋರಾಟದಲ್ಲಿ, ಆತನು ಸಮಾಧಿಗಳ ಮೇಲೆ ಸೈತಾನನ ಹಿಡಿತವನ್ನು ರದ್ದುಪಡಿಸಿದನು; ಮರಣದ ಮೇಲೆ ಬಲವುಳ್ಳವನನ್ನು ಅಂದರೆ ಸೈತಾನನನ್ನು ಶೂನ್ಯಕ್ಕೆ ತಂದನು (ಇಬ್ರಿಯ 2:14); ಸುವಾರ್ತೆಯ ಮುಖಾಂತರ ಜೀವವನ್ನೂ ಅಮರತ್ವವನ್ನೂ ತಂದನು (2 ತಿಮೊಥೆ 1:10). ಆಗ ಆತನು ಜಯೋತ್ಸವದಿಂದ ಹೀಗೆ ಸಾರುವನು: "(ನಾನು) ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ, ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ" (ಪ್ರಕಟನೆ 1:18). ಈ ಲೋಕದ ದೇವರ ದೊರೆತನಗಳನ್ನೂ ಅಧಿಕಾರಗಳನ್ನೂ ತೆಗೆದು ಹಾಕಿ, ಆತನು ತನ್ನ ಮಹಿಮೆಯುಳ್ಳ ಜಯವನ್ನು ಬಹಿರಂಗವಾಗಿ ಪ್ರದರ್ಶಿಸುವನು (ಕೊಲೊಸ್ಸೆ 2:15).

ಆ ವೈಭವವುಳ್ಳ ಜಯದಿಂದ ಮಾತ್ರವೇ ಜನರು ಮರಣದ ಭಯವನ್ನು ಕಳೆದುಕೊಳ್ಳಲು ಶಕ್ತರಾದರು (ಇಬ್ರಿಯ 2:15) ಮರ್ತ್ಯತೆಯ ಬಹಿರಂಗ ದೊರೆತನದಿಂದ ಜನರು ಮರಣವನ್ನೂ ತೆರೆದ ಸಮಾಧಿಯನ್ನೂ ಮೂದಲಿಸ ಬಹುದು: "ಮರಣವೇ ನಿನ್ನ ಜಯವೆಲ್ಲಿ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ?" (1 ಕೊರಿಂಥ 15:55). ಈಗ ಅವರು, "ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ" (1 ಕೊರಿಂಥ 15:57) ಎಂದು ಕೂಗಬಹುದು. " 'ಮರಣವು ನುಂಗಿಯೇ ಹೋಯಿತು, ಜಯವಾಯಿತು' ಎಂದು ಬರೆದಿರುವುದು ನೆರವೇರುವಾಗ" ಕ್ರೈಸ್ತರು ಅಂತಿಮ ಜಯಕ್ಕಾಗಿ ಮುನ್ನೋಡುವರು (1 ಕೊರಿಂಥ 15:54).

ಯೇಸುವು ನಮಗಾಗಿ ಮಾಡಿದ್ದರ ಕಾರಣಕ್ಕಾಗಿ, ದೇವರು ಸ್ತೊತ್ರದ ಮಾತುಗಳನ್ನೂ ಮೆಚ್ಚಿಕೆಯ ಕಾಣಿಕೆಗಳನ್ನೂ ಹಾಗೂ ಜನರಿಂದ ಕೃತಜ್ಞತೆಯನ್ನೂ ಹೊಂದಿಕೊಂಡನು. ಎಫೆಸ 4:8ರಲ್ಲಿ ಪೌಲನು, ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟು, ದಾವೀದನ ಮಾತುಗಳ ಹೊಸ ಒಡಂಬಡಿಕೆಯ ಅನ್ವಯದಲ್ಲಿ ಒಂದು ಪದವನ್ನು ಬದಲಾಯಿಸಿದನು. ದಾನಗಳನ್ನು ಹೊಂದಿದನು ಎಂಬುದರ ಬದಲು ಯೇಸುವು ದಾನಗಳನ್ನು ವಿತರಿಸಿದನು ಎಂದು ಅವನು ಹೇಳಿದನು. ಮರಣವನ್ನು ಜಯಿಸಿದ ಮೆಸ್ಸೀಯನು ದೇವರ ಬಲಗಡೆಗೆ ಏರಿಹೋದ ಹತ್ತು ದಿನಗಳ ತರುವಾಯ, ಆತನು

ತನ್ನ ಪರಿಶುದ್ಧಾತ್ಮನನ್ನು ಕಳುಹಿಸಿದನು ಮತ್ತು ಜನರಿಗೆ ದಾನಗಳನ್ನು ಕೊಟ್ಟನು.

ವಿಶೇಷವಾಗಿ, ಆತನು ತನ್ನ ರಾಯಭಾರಿಗಳಂತೆ ಅಪೊಸ್ತಲರಿಗೆ ಅಧಿಕಾರ ಕೊಟ್ಟನು, ಇತರರ ಮೇಲೆ ತಮ್ಮ ಕೈಗಳನ್ನಿಡಲು ಮತ್ತು ತಮ್ಮ ಅದ್ಭುತಕರವಾದ ವರಗಳನ್ನು ದಾಟಿಸಲು ಅವರಿಗೆ ಶಕ್ತಿಯನ್ನು ಕೊಟ್ಟನು. ಈ ವರಗಳನ್ನು ಸ್ವೀಕರಿಸಿಕೊಂಡವರು ಪ್ರವಾದಿಗಳಂತೆ ಸುವಾರ್ತಿಕರಂತೆ, ಸಭಾಪಾಲಕರಂತೆ ಮತ್ತು ಬೋಧಕರಂತೆ ಸೇವೆ ಮಾಡಲು ಅವುಗಳನ್ನು ಉಪಯೋಗಿಸಿದರು (ಎಫೆಸ 4:8-13). ವಿವಿಧ ವರಗಳ ಈ ಹಂಚುವಿಕೆಯು (1 ಕೊರಿಂಥ 12:4-11) ಸುವಾರ್ತೆಯನ್ನು ದೃಢಪಡಿಸುವಲ್ಲಿ ಮತ್ತು ದೇವರ ಜನರ ಭಕ್ತಿ ವೃದ್ಧಿಗೊಳಿಸಲು ಬೋಧನೆ ಕೊಡಲು ಸಾಧನವಾಗಿತ್ತು (ಇಬ್ರಿಯ 2:1-4; ರೋಮಾಪುರ 12:3-8).

ಈ ವರಗಳು ಅಲ್ಪಕಾಲ ಇದ್ದವು, ಎಲ್ಲಾ ಸತ್ಯವು ಸಂಪೂರ್ಣ ಪ್ರಕಟನೆಯ ತಿಳಿಸಲ್ಪಡುವವರೆಗೆ ಇದ್ದವು (ಯೋಹಾನ 16:13; 1 ಕೊರಿಂಥ 13:8-13). ಆ ತಾತ್ಕಾಲಿಕವಾದ, ಪ್ರಥಮ ಶತಮಾನದ ಅವಧಿಯಲ್ಲಿ, ಪ್ರಸಂಗಿಸಲ್ಪಟ್ಟ ವಾಕ್ಯವನ್ನು ದೃಢಪಡಿಸುವ ದೈವಿಕ ನೇಮಿತ ಉದ್ದೇಶವನ್ನು ಚೆನ್ನಾಗಿ ಸಾಧಿಸಿದವು (ಮಾರ್ಕ 16:17-20). ಪರಲೋಕದೊಳಗೆ ಏರಿಹೋದ ಅರಸರ ಅರಸನು ಹಾಗೂ ಕರ್ತರ ಕರ್ತನು ಭೂಲೋಕದ ಮೇಲಿನ ಜನರಿಗೆ ವರಗಳನ್ನು ಕೊಡುತ್ತ ಅದ್ಭುತಕರವಾದ ವರಗಳನ್ನು ಹಂಚಿದನು.

## ಅಮೂಲ್ಯವಾದ ಮೂಲೆಗಲ್ಲು (ಯೆಶಾಯ 28:16)

ಹೆಚ್ಚಾದ ಯೆಹೂದ್ಯರಿಗೆ ಕ್ರಿಸ್ತನು ತಿರಸ್ಕೃತ, ಬೇಡವಾದ ಕಟ್ಟಡದ ಕಲ್ಲು, ಆದರೆ ಇತರ ಜನರು ಆತನನ್ನು ಅಮೂಲ್ಯವಾದ ಮೂಲೆಗಲ್ಲು ಎಂದು ಗುರುತಿಸಿದರು. ಯೆಶಾಯನು ಇದನ್ನು ಮುಂತಿಳಿಸಿದನು:

> ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ, "ಇಗೋ, ಪರೀಕ್ಷಿತವಾಗಿಯೂ ಮಾನ್ಯವಾಗಿಯೂ ಇರುವ ಮೂಲೆಗಲ್ಲನ್ನು ಚೀಯೋನಿನಲ್ಲಿ ಸ್ಥಿರವಾದ ಅಸ್ತಿವಾರವನ್ನಾಗಿ ಇಡುತ್ತೇನೆ ..." (ಯೆಶಾಯ 28:16).

"... ಈ ಬಂಡೆಯ ಮೇಲೆ [ಪೇತ್ರನ ಮೇಲೆ ಅಲ್ಲ, ಆದರೆ ಅವನು ಹೇಳಿದ ಅಸ್ತಿವಾರದ ಅರಿಕೆಯ ಮೇಲೆ], ನನ್ನ ಸಭೆಯನ್ನು ಕಟ್ಟುವೆನು" (ಮತ್ತಾಯ 16:18ಎ, ಬಿ) ಎಂದು ಪೇತ್ರನಿಗೆ ಹೇಳಿದಾಗ ಯೇಸುವು ತನ್ನ ದೈವತ್ವದ ದೃಷ್ಟಾಂತವನ್ನು ಕ್ರೈಸ್ತತ್ವದ ಅಸ್ತಿ ವಾರದಂತೆ ಉಪಯೋಗಿಸಿದನು. ಯಾವುದೇ ಕೇವಲ ಮಾನವ ಅಸ್ತಿವಾರವು - ಪೇತ್ರನ ಇಲ್ಲವೇ ಯಾವುದೇ ಇತರ ಪಾಪಿಯ ಅಸ್ತಿವಾರವು - ಪಾಪ ಶುದ್ಧೀಕರಿಸಿದ ಜನರ ಸಂಸ್ಥೆಯನ್ನು ಬೆಂಬಲಿಸಲು ಸಾಕಾದಷ್ಟಾಗಿರುವದಿಲ್ಲ. "ಹಾಕಿರುವ ಅಸ್ತಿವಾರವು ಯೇಸು ಕ್ರಿಸ್ತನೇ; ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ" (1 ಕೊರಿಂಥ 3:11). ಅಪೊಸ್ತಲರೂ ಪ್ರವಾದಿಗಳೂ ಆತನ ಸಭೆಯನ್ನು ಕಟ್ಟುವಲ್ಲಿ ಯೇಸುವಿನೊಂದಿಗೆ ಕಾರ್ಯ ಮಾಡಿದರೂ ಮುಖ್ಯವಾದ ಕಲ್ಲು - ಒಬ್ಬನೇ ಆರಾಧನೆಗೆ ಯೋಗ್ಯವಾದಾತನು, ಪರೀಕ್ಷಿಸಲ್ಪಟ್ಟ ಹಾಗೂ ಅಮೂಲ್ಯನಾದ ಕೇವಲ ಒಬ್ಬಾತನು - ಯೇಸುವಾಗಿದ್ದಾನೆ (ಎಫೆಸ 2:20).

ಈ ವಿಷಯದಲ್ಲಿಯ ಯೇಸುವಿನ ಅಮೂಲ್ಯವಾದ ಹಾಗೂ ಅತೀ ಶ್ರೇಷ್ಠ

ವಾದ ಮೌಲ್ಯವು ಪೇತ್ರನು ಯೆಶಾಯ 28:16ನ್ನು ಉಲ್ಲೇಖಿಸಿದಂತೆ - ಪೇತ್ರನಿಂದ ಹೇಳಲ್ಪಟ್ಟಿದೆ. ಸಭೆಯ ಅಸ್ತಿವಾರ ಶಿಲೆಯಂತೆ - ಅವನು ತನ್ನನ್ನು ತೋರಿಸಲಿಲ್ಲ; ಆ ಸ್ಥಾನದಲ್ಲಿ ಯೇಸುವನ್ನು ಬಿಟ್ಟು ಬೇರೆ ಯಾರನ್ನೂ ಯೋಚಿಸದವನಾಗಿದ್ದನು:

> "ಇಗೋ, ಚೀಯೋನಿನಲ್ಲಿ ಮೂಲೆಗಲ್ಲನ್ನು ಇಡುತ್ತೇನೆ;
> ಅದು ಆಯಲ್ಪಟ್ಟದ್ದು, ಮಾನ್ಯವಾದದ್ದು;
> ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವದೇ ಇಲ್ಲ"
> ಎಂದು ಪರಿಶುದ್ಧ ಲೇಖನದಲ್ಲಿ ಬರೆದದೆ.
> ಆದದರಿಂದ ನಂಬುವವರಾದ ನಿಮಗೇ ಈ ಮಾನವುಂಟು; ...
> (1 ಪೇತ್ರ 2:6, 7ಎ).

ಟಿಪ್ಪಣಿಗಳು

[1]ಯೇಸು ಬಂದನಂತರ, ಇತರ ಎಬ್ಬಿಸುವಿಕೆಗಳು ಸಂಭವಿಸಿದವು: ತಬಿಥಾ (ಇಲ್ಲವೇ ದೊರ್ಕಳು; ಅಪೊಸ್ತಲರ ಕೃತ್ಯ 9:36-42), ನಾಯಿನ ಊರಿನ ವಿಧವೆಯ ಮಗ (ಲೂಕ 7:11-16), ಯಾಯೀರನ ಮಗಳು (ಮಾರ್ಕ 5:22, 23, 35-43; ಲೂಕ 8:41, 42, 49-56), ಲಾಜರ (ಯೋಹಾನ 11:1-45), ಯೇಸುವು ಶಿಲುಬೆಗೆ ಹಾಕಲ್ಪಟ್ಟಾಗ ಎಬ್ಬಿಸಲ್ಪಟ್ಟವರು (ಮತ್ತಾಯ 27:50-53). ಹಾಗೂ ಯುತಿಖನು (ಅಪೊಸ್ತಲರ ಕೃತ್ಯ 20:9-12). ಇವರಲ್ಲಿ ಪ್ರತಿಯೊಬ್ಬರೂ ಪುನಃ ಸಾಯಬೇಕಾಗಿತ್ತು. [2]ಜೆಕರ್ಯನ ಮುಂತಿಳಿಸುವಿಕೆಯ ನೇರವಾದ ನೆರವೇರಿಕೆಯು ತಿಳಿಯಲ್ಪಟ್ಟಿದೆ. Ras Shamra tablets ದೇವಾಲಯದ ಅಧಿಕಾರವನ್ನು *Yotser* ಎಂದು ಕರೆಯುತ್ತದೆ. ಅರ್ಥ "ರೂಪಿಸುವವನು, ಮೊದಲಿನವನು, ಕುಂಬಾರನು" ಎಂದಿದೆ. ಲೋಹಗಳನ್ನು ಕರಗಿಸುವಾ ತನು ರೂಪಿಸುವಾತನು *Yotser* ಆಗಿದ್ದಾನೆ. ಹಾಗೂ ಅವನು ದೇವಾಲಯದ ಖಜಾನೆಯೂ ಆಗಿದ್ದಿರಬಹುದು. Revised Standard ಆವೃತ್ತಿಯು ಈ ವಸ್ತು ಪ್ರಾಚ್ಯಶಾಸ್ತ್ರದ ಮಾಹಿತಿಯನ್ನು ಉಪಯೋಗಿಸುತ್ತದೆ ಮತ್ತು ಜೆಕರ್ಯನ ಮುಂತಿಳಿಸುವಿಕೆಯ ಅದರ ಭಾಷಾಂತರವನ್ನು ಪುನಃ ರಚಿಸುತ್ತದೆ: "ಮೂವತ್ತು ಬೆಳ್ಳಿ ಶೆಕೆಲುಗಳನ್ನು ನಾನು ತೆಗೆದು ಕೊಂಡು ಕರ್ತನ ಮನೆಯಲ್ಲಿಯ ಖಜಾನೆಯಲ್ಲಿ ಹಾಕಿದೆನು" ಹಾಗಿದ್ದರೂ, ಈ ವ್ಯಾಖ್ಯಾನವು ಸರಿಯಾಗಿದ್ದರೂ, ಮತ್ತಾಯನ ಮಾತುಗಳು ಜೆಕರ್ಯನ ಮುಂತಿಳಿಸುವಿಕೆಯ ಅಪ್ರತ್ಯಕ್ಷ ನೆರವೇರುವಿಕೆ ಇರುವದೆಂದು ತೋರಿಸುತ್ತವೆ. ಯಾಕಂದರೆ ಯಾಜಕರು ಯೂದನ ಹಣವನ್ನು ತೆಗೆದುಕೊಂಡು ಕುಂಬಾರನ ಹೊಲವನ್ನು ಕೊಂಡುಕೊಂಡರು. [3]Albert Barnes, *Matthew and Mark,* Notes on the New Testament (N.p., 1949; reprint, Grand Rapids, Mich.: Baker Book House, 1974), 302. [4]Jack P. Lewis ಅವರಿಂದ ವಿವಿಧ ಸಾಧ್ಯತೆಗಳು ಸಂಕ್ಷೇಪಿಸಲ್ಪಟ್ಟಿವೆ: "ಮತ್ತಾಯನಿಂದ ಹೇಳಲ್ಪಟ್ಟ ಸಮ್ಮಿಶ್ರ ವಾಕ್ಯಭಾಗವು ಜೆಕರ್ಯ 11:12, 13ನ್ನು ಪುನಃ ಕರೆಯುತ್ತದೆ ಹಾಗೂ ಕ್ರಮ ಪ್ರಕಾರವಾದ ಪರಿಶುದ್ಧ ಬರಹದ ಮತ್ತಾಯನ ಸೂತ್ರದೊಂದಿಗೆ ಇಲ್ಲಿ ಹೇಳಲ್ಪಟ್ಟಿದೆ (ಹೋಶೇಯ 1:22). ಇದು ಸೆಪ್ಟುಜಿಂಟ್ ಮತ್ತು ಮ್ಯಾಸೊರೇಟಿಕ್ ಪಠ್ಯ ಎರಡಕ್ಕಿಂತ ಸ್ವತಂತ್ರವಾಗಿದೆ. ಮ್ಯಾಸೊರೇಟಿಕ್ ಪಠ್ಯದಲ್ಲಿ "ಕುಂಬಾರ" ಎಂದಿದೆ ಹಾಗೂ ಸೆಪ್ಟುಜಿಂಟ್‌ದಲ್ಲಿ "ಖಜಾನೆ" ಎಂದಿದೆ. ಈ ವಿವರಣೆಗೆ ಯೆರೆಮೀಯನು ಒಂದು ಹೊಲವನ್ನು ಕೊಂಡುಕೊಳ್ಳುವದಕ್ಕೆ (ಯೆರೆಮೀಯ 32:6 ಇತ್ಯಾದಿ) ಮತ್ತು ಕುಂಬಾರನ ಮನೆಯನ್ನು ಸಂದರ್ಶಿಸುವದಕ್ಕೆ (ಯೆರೆಮೀಯ 18:2 ಇತ್ಯಾದಿ) ಕುರುಹುಗಳಿವೆ. ಅಪೊಸ್ತಲರ ಕೃತ್ಯ 1:19 ಇತ್ಯಾದಿ ವಚನಗಳು ಕೀರ್ತನೆ 69:25 ಮತ್ತು 109:9 ವಚನಗಳನ್ನು ಯೂದನೊಂದಿಗೆ ಸಂಬಂಧಿಸಿದ ಘಟನೆಗಳಿಗೆ ಸಂಬಂಧಿಸಿದಂತೆ ಹೇಳುತ್ತದೆ. ಯೆರೆಮೀಯನಿಗೆ ವಾಕ್ಯಭಾಗವನ್ನು ಸಂಬಂಧಿಸುವ ಸಮಸ್ಯೆಯನ್ನು ಪರಿಹರಿಸುವ ಪ್ರಯತ್ನಗಳು ಕೆಳಗಿನ ಸೂಚನೆಗಳನ್ನು ಒಳಗೊಂಡಿವೆ: (1) ನಕಲು ಪ್ರತಿ ಮಾಡುವಲ್ಲಿ ತಪ್ಪು ಇದೆ, (2) ಯೆರೆಮೀಯ ಮತ್ತು ಜೆಕರ್ಯರು ಭಾಗವಾಗಿದ್ದ

ಪ್ರವಾದಿಗಳ ಗುಂಪಿಗಾಗಿ ಒಂದು ಹೆಸರಿನಂತೆ ಯೆರೆಮೀಯನು ನಿಂತುಕೊಳ್ಳುತ್ತಾನೆ. (3) ಅನಂತರದ ಅವಿದ್ಯಾವಂತ ಬರಹಗಾರನು ಯೆರೆಮೀಯ ಎಂಬ ಪದ ಕೂಡಿಸಿದನು. (4) ಜೆಕರ್ಯನು ಬೇರೆಲ್ಲಿಯೂ ಕಂಡುಬರದ ಯೆರೆಮೀಯನಿಂದ ಬಂದ ಹೇಳಿಕೆಯನ್ನು ಕಾದಿಟ್ಟುಕೊಂಡಿದ್ದನು, ಹಾಗೂ (5) ಹೇಳಿಕೆಯು ಸಂಯುಕ್ತವಾಗಿತ್ತು, ಇಬ್ಬರೂ ಪ್ರವಾದಿಗಳಿಂದ ವಿಷಯವು ಉಪಯೋಗಿಸಲ್ಪಟ್ಟಿತು ಹಾಗೂ ಯೆರೆಮೀಯನಿಗೆ ಸಂಬಂಧಿಸಲ್ಪಟ್ಟಿತು. ಪ್ರಶ್ನೆಗೆ ಪರಿಹಾರವು ತಿಳಿದಿರುವದಿಲ್ಲ" (*The Gospel According to Matthew,* Part 2, The Living World Commentary Series [Austin, Tex.: Sweet Publishing Co., 1976; reprint, Abilene Tex.: ACU Press, 1984], 157).

© 2009 Truth for Today